KACM300004972020

Presented on : 03-11-2020
Registered on : 03-11-2020
Decided on : --
Duration :

***ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ ಃ ಕೊಪ್ಪ***

**ಉಪಸ್ಥಿತರುಃ ಶ್ರೀಮತಿ ನಂದಿನಿ ಎಂ.ಎನ್. , ಬಿ.ಎ., ಎಲ್ ಎಲ್.ಬಿ.,**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ**

**ದಿನಾಂಕ 17 ನೇ ಜುಲೈ ಮಾಹೆ 2026**

**ಸಿ.ಸಿ. ನಂಃ 391/2020**

**ಫಿರ್ಯಾದಿ : ಸರ್ಕಾರದ ಪರವಾಗಿ ಜಯಪುರ ಪೊಲೀಸರು**

**(ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

| | | |
|---|---|---|
| **ಆರೋಪಿ** | ಃ | ಸುಂದ್ರೇಶ ಬಿನ್ ಲೇಟ್ ಚಾಮಿ, *42* ವರ್ಷ, ವ್ಯವಸಾಯ ವೃತ್ತಿ, ವಾಸ ಅಡಿಗೆಬೈಲು, ಅಡಿಗೆಬೈಲು ಗ್ರಾಮ, ಕೊಪ್ಪ ತಾಲ್ಲೂಕು. |
| | | **(ಆರೋಪಿ ಪರವಾಗಿ ಶ್ರೀ ಎಂ.ಎಸ್.ಬಿ., ವಕೀಲರು** |

| | | | |
|---|---|---|---|
| 1 | ಅಪರಾಧ ನಡೆದ ದಿನಾಂಕ | ಃ | 01.12.2019 |
| 2 | ಅಪರಾಧ ವರದಿಯಾದ ದಿನಾಂಕ | ಃ | 01.12.2019 |
| 3 | ಫಿರ್ಯಾದುದಾರರ ಹೆಸರು | ಃ | ಶ್ರೀಮತಿ ಸೌಮ್ಯ |
| 4 | ಆರೋಪಿತರ ಬಂಧನದ ದಿನಾಂಕ | ಃ | ಆರೋಪಿಯು ಜಾಮೀನಿನ ಮೇಲಿರುತ್ತಾರೆ. |
| 5 | ಸಾಕ್ಷ್ಯ ವಿಚಾರಣೆ ಪ್ರಾರಂಭಿಸಿದ ದಿನಾಂಕ | ಃ | 18.07.2025 |

| | | | |
|---|---|---|---|
| 6 | ಸಾಕ್ಷ್ಯ ವಿಚಾರಣೆ ಮುಕ್ತಾಯ ಗೊಳಿಸಿದ ದಿನಾಂಕ | ಃ | 10.07.2026. |
| 7 | ಆರೋಪಿಸಿರುವ ಅಪರಾಧಗಳು | | ಭಾ.ದಂ.ಸಂ.ಕಲಂ 501, 509, 354(ಸಿ). |
| 8 | ನ್ಯಾಯಾಧೀಶರ ತೀರ್ಮಾನ | ಃ | ಆರೋಪಿಯು ಭಾ.ದಂ.ಸಂ.ಕಲಂ 501, 509, 354(ಸಿ)ರ ಅಪರಾಧಕ್ಕೆ ನಿರ್ದೋಷಿಯಾಗಿರುತ್ತಾರೆ. |
| 9 | ಫಿರ್ಯಾದುದಾರರನ್ನು ಪ್ರತಿನಿಧಿಸಿದವರು | ಃ | ಸ.ಸ.ಅ. |
| 10 | ಪ್ರತಿನಿಧಿಸಿದವರು ಆರೋಪಿ ಪರ | ಃ | **(ಆರೋಪಿತರ ಪರವಾಗಿ ಶ್ರೀ ಎಂ. ಎಸ್. ಬಿ., ವಕೀಲರು)** |

ಸಹಿ/-xxx17.07.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

## ***ತೀರ್ಪು***

ಪೊಲೀಸ್ ಉಪನಿರೀಕ್ಷಕರು, ಜಯಪುರ ಪೊಲೀಸ್ ಠಾಣೆ, ಇವರು ಆರೋಪಿಯು ಭಾ.ದಂ.ಸಂ.ಕಲಂ 501, 509, 354(ಸಿ)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ಜಯಪುರ ಪೊಲೀಸ್ ಠಾಣಾ ಸರಹದ್ದಿನ ಜಯಪುರ ಪಟ್ಟಣದಲ್ಲಿ ವಾಸವಿರುವ ಚಾಸಾ 1 ಶ್ರೀಮತಿ ಸೌಮ್ಯರವರ ಮಾನಹಾನಿಯನ್ನುಂಟು ಮಾಡುವ ಉದ್ದೇಶದಿಂದ ಆರೋಪಿಯು ಈ ಪ್ರಕರಣ ದಾಖಲಾದ ಸುಮಾರು 6 ತಿಂಗಳ ಹಿಂದಿನಿಂದ ಅಶ್ಲೀಲಕರವಾದ ಪದಗಳನ್ನು ಮುದ್ರಿಸಿ ಆ ಕರಪತ್ರಗಳಲ್ಲಿ ಚಾಸಾ.1 ರವರ ಪೋಟೋವನ್ನು ಸಹಾ ಮುದ್ರಿಸಿ, ಜಯಪುರ ಪಟ್ಟಣದಲ್ಲಿ ಅಲ್ಲಲ್ಲಿ ಹಾಕಿ, ಚಾಸಾ.1 ರವರ ಮಾನಹಾನಿ ಮಾಡುತ್ತಿದ್ದುದ್ದಲ್ಲದೇ, ಅಶ್ಲೀಲಕರವಾದ ಕರಪತ್ರಗಳನ್ನು ಹಾಗೂ ಅಶ್ಲೀಲವಾಗಿ ಬರೆದಿರುವ ಅನಾಮದೇಯ ಪತ್ರಗಳನ್ನು ಚಾಸಾ 1 ರವರ ವಿಳಾಸಕ್ಕೆ ಕಳುಹಿಸಿ ಅವರಿಗೆ ಮಾನಸಿಕವಾಗಿ ನೋವುಂಟು ಮಾಡಿದ್ದಲ್ಲದೇ, ದಿನಾಂಕ 01.12.2019 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಆಡುವಳ್ಳಿ ಗ್ರಾಮದ ಗುರುವಳ್ಳಿಯಲ್ಲಿರುವ ಚಾಸಾ.8 ಶ್ರೀಮತಿ ಜಯಂತಿರವರ ವಾಸದ ಮನೆಯ ಹತ್ತಿರ ಕೆಎ.18/ಯು-4603 ನೇ ಸಂಖ್ಯೆಯ ಟಿವಿಎಸ್ ಅಪಾಚಿ ಬೈಕಿನಲ್ಲಿ ಹೋಗಿ ಚಾಸಾ.1 ರವರ ಮಾನಕ್ಕೆ ಕುಂದುಬರುವಂತಹ ಅಶ್ಲೀಲವಾದ ಶಬ್ದಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ, ಅದಕ್ಕೆ ಚಾಸಾ1 ರವರ ಪೋಟೋ ಹಾಕಿ, ಫೋನ್ ನಂಬರುಗಳನ್ನು ಬರೆದು ಚಾಸಾ1 ರವರ ಸಂಬಂಧಿಕರಾದ ಚಾಸಾ 8 ಶ್ರೀಮತಿ ಜಯಂತಿರವರ ಮನೆಯ ಗೇಟಿನ ಹತ್ತಿರ ಹಾಕಿ ಫಿರ್ಯಾದುದಾರರ ಮಾನಹಾನಿ ಮಾಡಿರುವುದು ತನಿಖೆಯಿಂದ ಸಾಬೀತಾಗಿದ್ದರಿಂದ ಆರೋಪಿಯು ಭಾ.ದಂ.ಸಂ.ಕಲಂ 501, 509, 354(ಸಿ)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ತನಿಖಾಧಿಕಾರಿಗಳು ಆರೋಪಿಯ ವಿರುದ್ಧ ಮೇಲ್ಕಂಡ ಕಲಂ ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ತನಿಖಾಧಿಯು ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ನಂತರ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗೆ ಸಮನ್ಸ್ ಜಾರಿ ಮಾಡಲಾಗಿರುತ್ತದೆ. ಆರೋಪಿಯು ತನ್ನ ಪರ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿದ ಮೇರೆಗೆ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ಅ.ಪ್ರ.ಸಂ. ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲನ್ನು ಆರೋಪಿಗೆ ಒದಗಿಸಲಾಯಿತು. ನಂತರ ಮೇಲ್ಕಂಡ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಆರೋಪಿಗೆ ಓದಿ ಹೇಳಲಾಯಿತು. ಆರೋಪಿಯು ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

4. ಅಭಿಯೋಜನೆಯವರು ತಮ್ಮ ಪರವಾಗಿ ಒಟ್ಟು 21 ಜನ ಸಾಕ್ಷಿದಾರರನ್ನು ದೋಷಾರೋಪಣಾ ಪತ್ರದಲ್ಲಿ ಉಲ್ಲೇಖಿಸಿ, ಸದರಿ 11 ಜನ ಸಾಕ್ಷಿದಾರರನ್ನು ಪ್ರಾಸಾ 1 ರಿಂದ 11 ಎಂದು ವಿಚಾರಣೆ ಮಾಡಿಕೊಂಡು ನಿಪಿ.1 ರಿಂದ 23 ದಾಖಲೆಗಳನ್ನು ಹಾಗೂ ಮುದ್ದೆಮಾಲು.1 ರಿಂದ ಮುದ್ದೆಮಾಲು.3 ಗಳನ್ನು ಗುರ್ತಿಸಿಕೊಂಡಿರುತ್ತಾರೆ. ನಂತರ ಅ.ಪ್ರ.ಸಂ. ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿಯ ಆತನ ವಿರುದ್ಧದ ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯವನ್ನು ಸಂಪೂರ್ಣವಾಗಿ ಸುಳ್ಳು ಎಂದು ಅಲ್ಲಗಳೆದಿದ್ದು ಅವರ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

Visit **ecourts.gov.in** for updates or download mobile app "**eCourts Services**" from Android or iOS

5. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳು ನನ್ನ ತೀರ್ಮಾನಕ್ಕೆ ಉದ್ಭವಿಸುತ್ತವೆ.

1) ಜಯಪುರ ಪೊಲೀಸ್ ಠಾಣಾ ಸರಹದ್ದಿನ ಜಯಪುರ ಪಟ್ಟಣದಲ್ಲಿ ವಾಸವಿರುವ ಚಾಸಾ 1 ಶ್ರೀಮತಿ ಸೌಮ್ಯರವರ ಮಾನಹಾನಿಯನ್ನುಂಟು ಮಾಡುವ ಉದ್ದೇಶದಿಂದ ಆರೋಪಿಯು ಈ ಪ್ರಕರಣ ದಾಖಲಾದ ಸುಮಾರು 6 ತಿಂಗಳ ಹಿಂದಿನಿಂದ ಅಶ್ಲೀಲಕರವಾದ ಪದಗಳನ್ನು ಮುದ್ರಿಸಿ ಆ ಕರಪತ್ರಗಳಲ್ಲಿ ಚಾಸಾ.1 ರವರ ಫೋಟೋವನ್ನು ಸಹಾ ಮುದ್ರಿಸಿ, ಜಯಪುರ ಪಟ್ಟಣದಲ್ಲಿ ಅಲ್ಲಲ್ಲಿ ಹಾಕಿ, ಚಾಸಾ.1 ರವರ ಮಾನಹಾನಿ ಮಾಡುತ್ತಿದ್ದುದ್ದಲ್ಲದೇ, ಅಶ್ಲೀಲಕರವಾದ ಕರಪತ್ರಗಳನ್ನು ಹಾಗೂ ಅಶ್ಲೀಲವಾಗಿ ಬರೆದಿರುವ ಅನಾಮದೇಯ ಪತ್ರಗಳನ್ನು ಚಾಸಾ 1 ರವರ ವಿಳಾಸಕ್ಕೆ ಕಳುಹಿಸಿ ಅವರಿಗೆ ಮಾನಸಿಕವಾಗಿ ನೋವುಂಟು ಮಾಡಿದ್ದಲ್ಲದೇ, ದಿನಾಂಕ 01.12.2019 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಆಡುವಳ್ಳಿ ಗ್ರಾಮದ ಗುರುವಳ್ಳಿಯಲ್ಲಿರುವ ಚಾಸಾ.8 ಶ್ರೀಮತಿ ಜಯಂತಿರವರ ವಾಸದ ಮನೆಯ ಹತ್ತಿರ ಕೆಎ.18/ಯು-4603 ನೇ ಸಂಖ್ಯೆಯ ಟಿವಿಎಸ್ ಅಪಾಚಿ ಬೈಕಿನಲ್ಲಿ ಹೋಗಿ ಚಾಸಾ.1 ರವರ ಮಾನಕ್ಕೆ ಕುಂದುಬರುವಂತಹ ಅಶ್ಲೀಲವಾದ ಶಬ್ದಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ, ಅದಕ್ಕೆ ಚಾಸಾ1 ರವರ ಫೋಟೋ ಹಾಕಿ, ಫೋನ್ ನಂಬರುಗಳನ್ನು ಬರೆದು ಚಾಸಾ1 ರವರ ಸಂಬಂಧಿಕರಾದ ಚಾಸಾ.8 ಶ್ರೀಮತಿ ಜಯಂತಿರವರ ಮನೆಯ ಗೇಟಿನ ಹತ್ತಿರ ಹಾಕಿ ಫಿರ್ಯಾದುದಾರರ ಮಾನಕ್ಕೆ ಕುಂದುಂಟಾಗುತ್ತದೆ ಎಂದು ತಿಳಿದೂ ಸಹ ಅವರ ಬಗ್ಗೆ ಮಾನಹಾನಿಯಾಗುವಂತಹ ಹೇಳಿಕೆಯನ್ನು ಮುದ್ರಿಸಿ, ಭಾ.ದಂ. ಸಂ. ಕಲಂ 501 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು

ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತು ಪಡಿಸಿರುತ್ತಾರೆಯೇ?

2) ಜಯಪುರ ಪೊಲೀಸ್ ಠಾಣಾ ಸರಹದ್ದಿನ ಜಯಪುರ ಪಟ್ಟಣದಲ್ಲಿ ವಾಸವಿರುವ ಚಾಸಾ 1 ಶ್ರೀಮತಿ ಸೌಮ್ಯರವರ ಮಾನಹಾನಿಯನ್ನುಂಟು ಮಾಡುವ ಉದ್ದೇಶದಿಂದ ಆರೋಪಿಯು ಈ ಪ್ರಕರಣ ದಾಖಲಾದ ಸುಮಾರು 6 ತಿಂಗಳ ಹಿಂದಿನಿಂದ ಅಶ್ಲೀಲಕರವಾದ ಪದಗಳನ್ನು ಮುದ್ರಿಸಿ ಆ ಕರಪತ್ರಗಳಲ್ಲಿ ಚಾಸಾ.1 ರವರ ಪೋಟೋವನ್ನು ಸಹಾ ಮುದ್ರಿಸಿ, ಜಯಪುರ ಪಟ್ಟಣದಲ್ಲಿ ಅಲ್ಲಲ್ಲಿ ಹಾಕಿ, ಚಾಸಾ.1 ರವರ ಮಾನಹಾನಿ ಮಾಡುತ್ತಿದ್ದುದ್ದಲ್ಲದೇ, ಅಶ್ಲೀಲಕರವಾದ ಕರಪತ್ರಗಳನ್ನು ಹಾಗೂ ಅಶ್ಲೀಲವಾಗಿ ಬರೆದಿರುವ ಅನಾಮದೇಯ ಪತ್ರಗಳನ್ನು ಚಾಸಾ 1 ರವರ ವಿಳಾಸಕ್ಕೆ ಕಳುಹಿಸಿ ಅವರಿಗೆ ಮಾನಸಿಕವಾಗಿ ನೋವುಂಟು ಮಾಡಿದ್ದಲ್ಲದೇ, ದಿನಾಂಕ 01.12.2019 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಆಡುವಳ್ಳಿ ಗ್ರಾಮದ ಗುರುವಳ್ಳಿಯಲ್ಲಿರುವ ಚಾಸಾ.8 ಶ್ರೀಮತಿ ಜಯಂತಿರವರ ವಾಸದ ಮನೆಯ ಹತ್ತಿರ ಕೆಎ.18/ಯು-4603 ನೇ ಸಂಖ್ಯೆಯ ಟಿವಿಎಸ್ ಅಪಾಚಿ ಬೈಕಿನಲ್ಲಿ ಹೋಗಿ ಚಾಸಾ.1 ರವರ ಮಾನಕ್ಕೆ ಕುಂದುಬರುವಂತಹ ಅಶ್ಲೀಲವಾದ ಶಬ್ದಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ, ಅದಕ್ಕೆ ಚಾಸಾ1 ರವರ ಪೋಟೋ ಹಾಕಿ, ಫೋನ್ ನಂಬರುಗಳನ್ನು ಬರೆದು ಚಾಸಾ1 ರವರ ಸಂಬಂಧಿಕರಾದ ಚಾಸಾ.8 ಶ್ರೀಮತಿ ಜಯಂತಿರವರ ಮನೆಯ ಗೇಟಿನ ಹತ್ತಿರ ಹಾಕಿ ಫಿರ್ಯಾದುದಾರರ ಮಾನಕ್ಕೆ ಕುಂದುಂಟು ಮಾಡುವಂತಹ ಕೃತ್ಯವನ್ನು ಎಸಗಿ, ಭಾ.ದಂ. ಸಂ. ಕಲಂ 509 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತು ಪಡಿಸಿರುತ್ತಾರೆಯೇ?

3) ಜಯಪುರ ಪೊಲೀಸ್ ಠಾಣಾ ಸರಹದ್ದಿನ ಜಯಪುರ ಪಟ್ಟಣದಲ್ಲಿ ವಾಸವಿರುವ ಚಾಸಾ 1 ಶ್ರೀಮತಿ ಸೌಮ್ಯರವರ ಮಾನಹಾನಿಯನ್ನುಂಟು ಮಾಡುವ ಉದ್ದೇಶದಿಂದ ಆರೋಪಿಯು ಈ ಪ್ರಕರಣ ದಾಖಲಾದ ಸುಮಾರು 6 ತಿಂಗಳ ಹಿಂದಿನಿಂದ ಅಶ್ಲೀಲಕರವಾದ ಪದಗಳನ್ನು ಮುದ್ರಿಸಿ ಆ

ಕರಪತ್ರಗಳಲ್ಲಿ ಚಾಸಾ.1 ರವರ ಫೋಟೋವನ್ನು ಸಹಾ ಮುದ್ರಿಸಿ, ಜಯಪುರ ಪಟ್ಟಣದಲ್ಲಿ ಅಲ್ಲಲ್ಲಿ ಹಾಕಿ, ಚಾಸಾ.1 ರವರ ಮಾನಹಾನಿ ಮಾಡುತ್ತಿದ್ದುದ್ದಲ್ಲದೇ, ಅಶ್ಲೀಲಕರವಾದ ಕರಪತ್ರಗಳನ್ನು ಹಾಗೂ ಅಶ್ಲೀಲವಾಗಿ ಬರೆದಿರುವ ಅನಾಮದೇಯ ಪತ್ರಗಳನ್ನು ಚಾಸಾ 1 ರವರ ವಿಳಾಸಕ್ಕೆ ಕಳುಹಿಸಿ ಅವರಿಗೆ ಮಾನಸಿಕವಾಗಿ ನೋವುಂಟು ಮಾಡಿದ್ದಲ್ಲದೇ, ದಿನಾಂಕ 01.12.2019 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಆಡುವಳ್ಳಿ ಗ್ರಾಮದ ಗುರುವಳ್ಳಿಯಲ್ಲಿರುವ ಚಾಸಾ.8 ಶ್ರೀಮತಿ ಜಯಂತಿರವರ ವಾಸದ ಮನೆಯ ಹತ್ತಿರ ಕೆಎ.18/ಯು-4603 ನೇ ಸಂಖ್ಯೆಯ ಟಿವಿಎಸ್ ಅಪಾಚಿ ಬೈಕಿನಲ್ಲಿ ಹೋಗಿ ಚಾಸಾ.1 ರವರ ಮಾನಕ್ಕೆ ಕುಂದುಬರುವಂತಹ ಅಶ್ಲೀಲವಾದ ಶಬ್ದಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ, ಅದಕ್ಕೆ ಚಾಸಾ1 ರವರ ಫೋಟೋ ಹಾಕಿ, ಫೋನ್ ನಂಬರುಗಳನ್ನು ಬರೆದು ಚಾಸಾ1 ರವರ ಸಂಬಂಧಿಕರಾದ ಚಾಸಾ.8 ಶ್ರೀಮತಿ ಜಯಂತಿರವರ ಮನೆಯ ಗೇಟಿನ ಹತ್ತಿರ ಹಾಕಿ ಫಿರ್ಯಾದುದಾರರ ಮಾನಕ್ಕೆ ಕುಂದುಂಟು ಮಾಡಿ, ಭಾ.ದಂ. ಸಂ. ಕಲಂ 354(ಸಿ)ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯರಹಿತವಾಗಿ ಸಾಬೀತು ಪಡಿಸಿರುತ್ತಾರೆಯೇ?

4) ಯಾವ ಆದೇಶ?

7. ನ್ಯಾಯಾಲಯದ ಮುಂದಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ 1 ಃ ನಕಾರಾತ್ಮಕವಾಗಿ
ಅಂಶ 2 ಃ ನಕಾರಾತ್ಮಕವಾಗಿ
ಅಂಶ 3 ಃ ನಕಾರಾತ್ಮಕವಾಗಿ
ಅಂಶ 4 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಃ

Visit **ecourts.gov.in** for updates or download mobile app "**eCourts Services**" from Android or iOS

## ***ಕಾರಣಗಳು***

8. ***ಅಂಶ 1 ರಿಂದ 3ಃ -***

ಮೇಲ್ಕಂಡ ಅಂಶಗಳನ್ನು ಪುನಾರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು, ಜಯಪುರ ಪೊಲೀಸ್ ಠಾಣಾ ಸರಹದ್ದಿನ ಜಯಪುರ ಪಟ್ಟಣದಲ್ಲಿ ವಾಸವಿರುವ ಚಾಸಾ 1 ಶ್ರೀಮತಿ ಸೌಮ್ಯರವರ ಮಾನಹಾನಿಯನ್ನುಂಟು ಮಾಡುವ ಉದ್ದೇಶದಿಂದ ಆರೋಪಿಯು ಈ ಪ್ರಕರಣ ದಾಖಲಾದ ಸುಮಾರು 6 ತಿಂಗಳ ಹಿಂದಿನಿಂದ ಅಶ್ಲೀಲಕರವಾದ ಪದಗಳನ್ನು ಮುದ್ರಿಸಿ ಆ ಕರಪತ್ರಗಳಲ್ಲಿ ಚಾಸಾ.1 ರವರ ಪೋಟೋವನ್ನು ಸಹಾ ಮುದ್ರಿಸಿ, ಜಯಪುರ ಪಟ್ಟಣದಲ್ಲಿ ಅಲ್ಲಲ್ಲಿ ಹಾಕಿ, ಚಾಸಾ.1 ರವರ ಮಾನಹಾನಿ ಮಾಡುತ್ತಿದ್ದುದ್ದಲ್ಲದೇ, ಅಶ್ಲೀಲಕರವಾದ ಕರಪತ್ರಗಳನ್ನು ಹಾಗೂ ಅಶ್ಲೀಲವಾಗಿ ಬರೆದಿರುವ ಅನಾಮದೇಯ ಪತ್ರಗಳನ್ನು ಚಾಸಾ 1 ರವರ ವಿಳಾಸಕ್ಕೆ ಕಳುಹಿಸಿ ಅವರಿಗೆ ಮಾನಸಿಕವಾಗಿ ನೋವುಂಟು ಮಾಡಿದ್ದಲ್ಲದೇ, ದಿನಾಂಕ 01.12.2019 ರಂದು ಸಂಜೆ 6-00 ಗಂಟೆ ಸಮಯದಲ್ಲಿ ಆಡುವಳ್ಳಿ ಗ್ರಾಮದ ಗುರುವಳ್ಳಿಯಲ್ಲಿರುವ ಚಾಸಾ.8 ಶ್ರೀಮತಿ ಜಯಂತಿರವರ ವಾಸದ ಮನೆಯ ಹತ್ತಿರ ಕೆಎ.18/ಯು-4603 ನೇ ಸಂಖ್ಯೆಯ ಟಿವಿಎಸ್ ಅಪಾಚಿ ಬೈಕಿನಲ್ಲಿ ಹೋಗಿ ಚಾಸಾ.1 ರವರ ಮಾನಕ್ಕೆ ಕುಂದುಬರುವಂತಹ ಅಶ್ಲೀಲವಾದ ಶಬ್ದಗಳನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಸಿ, ಅದಕ್ಕೆ ಚಾಸಾ1 ರವರ ಪೋಟೋ ಹಾಕಿ, ಫೋನ್ ನಂಬರುಗಳನ್ನು ಬರೆದು ಚಾಸಾ1 ರವರ ಸಂಬಂಧಿಕರಾದ ಚಾಸಾ 8 ಶ್ರೀಮತಿ ಜಯಂತಿರವರ ಮನೆಯ ಗೇಟಿನ ಹತ್ತಿರ ಹಾಕಿ ಫಿರ್ಯಾದುದಾರರ

ಮಾನಹಾನಿ ಮಾಡಿರುವುದು ತನಿಖೆಯಿಂದ ಸಾಬೀತಾಗಿದ್ದರಿಂದ ಆರೋಪಿಯು ಭಾ.ದಂ.ಸಂ.ಕಲಂ 501, 509, 354(ಸಿ)ರ ಆರೋಪಗಳನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯ ಮೇಲಿದ್ದು, ಅದಕ್ಕಾಗಿ ಅಭಿಯೋಜನೆಯು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ. ಅಭಿಯೋಜನೆಯವರು ತಮ್ಮ ಪ್ರಕರಣಕ್ಕೆ ಪೂರಕವಾಗಿ ಪ್ರಾಸಾ.1 ರಿಂದ ಪ್ರಾಸಾ.11 ರವರನ್ನು ವಿಚಾರಣೆ ಮಾಡಿಕೊಂಡು ನಿಪಿ.1 ರಿಂದ 23 ದಾಖಲೆಗಳನ್ನು ಹಾಗೂ ಮುದ್ದೆ ಮಾಲು-1 ರಿಂದ 3 ಗಳನ್ನು ಗುರ್ತಿಸಿಕೊಂಡಿರುತ್ತಾರೆ.

9. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ-1/ಪ್ರಾಸಾ-1 ಶ್ರೀಮತಿ ಸೌಮ್ಯರವರು ಪಿರ್ಯಾದಿ ಹಾಗೂ ನೊಂದ ಸಾಕ್ಷಿಯಾಗಿದ್ದು, ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 2 ಮತ್ತು ಚಾಸಾ.3 ರವರು ತಮ್ಮ ಪಕ್ಕದ ಮನೆಯವರೆಂತಲೂ, ಚಾಸಾ.8 ತನ್ನ ಚಿಕ್ಕಮ್ಮ, ಚಾಸಾ 9 ತನ್ನ ತಮ್ಮ ಎಂದು, ಸುಮಾರು 10 ವರ್ಷಗಳ ಹಿಂದೆ ತನ್ನ ಗಂಡನಿಂದ ತಾನು ಪ್ರತ್ಯೇಕವಾಗಿ ತನ್ನ ಮಕ್ಕಳೊಂದಿಗೆ ವಾಸವಿದ್ದೇನೆಂತಲೂ, ಆರೋಪಿ ತನ್ನ ಹೆಸರಿನಲ್ಲಿ ಕರಪತ್ರಗಳನ್ನು ಬರೆದು, ರಸ್ತೆ ಮೇಲೆ ಹಾಗೂ ಸಂಬಂಧಿಕರ ಮನೆಯ ವಿಳಾಸಕ್ಕೆ ಹಾಗೂ ತನ್ನ ವಿಳಾಸಕ್ಕೆ ಕೆಟ್ಟ ಕೆಟ್ಟದಾಗಿ ಬರೆದು ಹಾಕಿರುತ್ತಾರೆಂತಲೂ, ದಿನಾಕಃ01/12/2019 ರಂದು ಚಾಸಾ 8 ರವರ ಮನೆ ಬಳಿ ಹೋಗಿ ತನ್ನ ಹೆಸರಿನಲ್ಲಿ

ಕೆಟ್ಟದಾಗಿ ಕರಪತ್ರವನ್ನು ಹಾಗೂ ಫೋಟೋ ಹಾಕಿದ್ದರೆಂತಲೂ, ಚಾಸಾ 8 ತನಗೆ 6 ಗಂಟೆಗ ಫೋನ್ ಮಾಡಿ ತಿಳಿಸಿದರೆಂತಲೂ, ಆ ದಿನ ತಾನು ದೂರು ದಾಖಲಿಸಿರುವುದಿಲ್ಲವೆಂತಲೂ, ದಿನಾಂಕಃ 02/12/2019 ರಂದು ಆರೋಪಿಯ ವಿರುದ್ಧ ಜಯಪುರ ಪೊಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆಂತಲೂ, ನಂತರ ದಿನಾಂಕಃ03/12/2019 ರಂದು ಪೋಲಿಸರು ತನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆಂತಲೂ, ದಿನಾಂಕಃ04/12/2019 ರಂದು ಶೃಂಗೇರಿ ನ್ಯಾಯಾಧೀಶರ ಮುಂದೆ ತನ್ನ ಕಲಂ 164 ರಲ್ಲಿ ಹೇಳಿಕೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ತಾನು ನೀಡಿದ ದೂರನ್ನು ನಿಪಿ.1 ಎಂದು, ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

10. ಚಾಸಾ.1/ಪ್ರಾಸಾ.1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಸದರಿ ಪಾಟೀ ಸವಾಲಿನಲ್ಲಿ ಃ

> **"ಸದರಿ ಪ್ರಕರಣ ದಾಖಲಾಗುವ ಕಾಲಕ್ಕೆ ನಾನು ಏರ್ ಟೆಲ್ ಕಂಪನಿಯ ಮೊಬೈಲ್ ಅನ್ನು ಬಳುತ್ತಿದ್ದೆನು. ಸದರಿ ಮೊಬೈಲ್ ಮೂಲಕ ಜಯಪುರ ಠಾಣೆಯ ಯಾವ ಯಾವ ಸಿಬ್ಬಂದಿಗಳೊಂದಿಗೆ ಮಾತನಾಡಿರುತ್ತೀರಾ ಎಂದರೆ ಯಾವ ಸಿಬ್ಬಂದಿಗಳೊಂದಿಗೂ ಮಾತನಾಡಿರುವುದಿಲ್ಲ. ಪ್ರಕರಣ ಆರೋಪಿ ಸುಂದರೇಶ್ ನನಗೆ ಚಿಕ್ಕ ವಯಸ್ಸಿನಿಂದಲೂ ಪರಿಚಯ ಇದ್ದರು. ಸದರಿಯವರು ನಮ್ಮ ಮನೆಯ ಅಕ್ಕಪಕ್ಕದವರಾಗಿದ್ದರಿಂದ ಆ ರೀತಿಯಾಗಿ ಪರಿಚಯ ಇದ್ದರು. ನಾನು ಹಾಗೂ ಆರೋಪಿ ಒಂದೆ ಸಮುದಾಯದವರಾಗಿರುತ್ತೇವೆ. ನನ್ನ ಮಾತೃಭಾಷೆ ತುಳುವಾಗಿರುತ್ತದೆ, ಆರೋಪಿಯ ಸುಂದರೇಶ್ ಅವರ ಮಾತೃಭಾಷೆ ಮಲಯಾಳಂ ಆಗಿರುತ್ತದೆ. ನನಗೂ ಹಾಗೂ**

ಆರೋಪಿಗೂ ಸದರಿ ಪ್ರಕರಣಕ್ಕಿಂತ ಮುಂಚೆ ಯಾವುದೇ ಆಪ್ತವಾದ ಸಂಬಂಧ ಇರಲಿಲ್ಲ.

ನನ್ನ ಮೇಲೆ ಇದೆ ನ್ಯಾಯಾಲಯದಲ್ಲಿ ಸಿ.ಸಿ. ನಂಬರ್ 34/2021 ರಂತೆ ನನ್ನ ವಿರುದ್ಧ ಆರೋಪಿ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಆರೋಪಿ ನನ್ನೊಂದಿಗೆ 2 ನೇ ಆರೋಪಿಯಾಗಿರುತ್ತಾರೆ ಎಂದರೆ ಸರಿ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ದ್ವೇಷ ಹಾಗೂ ಭಿನ್ನಾಭಿಪ್ರಾಯ ಇರುವುದಿಲ್ಲ ಎಂದರೆ ಸರಿ.

ನಾನು ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಲು ಯಾವುದೇ ನಿರ್ದಿಷ್ಟ ಕಾರಣ ಇರುವುದಿಲ್ಲ ಎಂದರೆ ತುಂಬಾ ಕಾರಣಗಳು ಇರುತ್ತವೆ ಎನ್ನುತ್ತಾರೆ. ಆ ರೀತಿ ಯಾವ ಕಾರಣಗಳು ಇರುತ್ತವೆ ಎಂದರೆ ಆರೋಪಿ ನಮ್ಮ ಪಕ್ಕದ ಮನೆಯವರಾಗಿದ್ದರಿಂದ ಫೋನ್ ನ ಸಂಭಾಷಣೆಯಲ್ಲಿ ಬೇರೆ ರೀತಿಯ ಟಾರ್ಚರ್ ಮಾಡಲು ಶುರು ಮಾಡಿದ್ದರು. ಆದ್ದರಿಂದ ನಾನು ಪ್ರಕರಣ ದಾಖಲು ಮಾಡಿರುತ್ತೇನೆ. ಈ ರೀತಿ ಆರೋಪಿ ನನ್ನೊಂದಿಗೆ ಫೋನ್ ಮೂಲಕ ಸಂಭಾಷಣೆ ಮಾಡುತ್ತಿದ್ದಾಗ ನಾನು ಅಡಿಗೆ ಬೈಲಿನಲ್ಲಿ ಇರಲಿಲ್ಲ ಜಯಪುರದಲ್ಲಿ ಇದ್ದೆನು ಎಂದರೆ ಸರಿ.

ನನಗೆ ಆರೋಪಿ ಫೋನ್ ಮಾಡುತ್ತಿದ್ದ ಎಂದು ನುಡಿದಿದ್ದು ಅದೆ ರೀತಿ ನನ್ನ ಬಾಡಿಗೆದಾರರಿಗೂ ಸಹಾ ಫೋನ್ ಮಾಡುತ್ತಿದ್ದ. ನನ್ನ ಬಾಡಿಗೆದಾರರು ಚಂದ್ರಶೇಖರ್ ಎಂಬುವವರಾಗಿದ್ದರು. ಸದರಿ ಚಂದ್ರಶೇಖರ್ ಅವರು ಆರೋಪಿ ವಿರುದ್ಧ ದೂರು ದಾಖಲಿಸುವಂತೆ ತಿಳಿಸಿದ್ದರು.

ಆರೋಪಿ ನನ್ನ ತಂದೆ-ತಾಯಿ, ಸಹೋದರ ಹಾಗೂ ಸಹೋದರಿಗೆ ಆರೋಪಿಯ ಮೂಲಕ ಕಾಗದ ಬರುತ್ತಿತ್ತು. ಸದರಿ ಸಂಗತಿಯನ್ನು ಆರೋಪಿಯೇ ನನಗೆ ತಿಳಿಸಿದ್ದರು. ಆ ರೀತಿ ಆರೋಪಿ ಬರೆದ ಪತ್ರಗಳನ್ನು ನಾನು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಆ ರೀತಿ ಒಟ್ಟು ಎಷ್ಟು ಪತ್ರಗಳು ಬರೆಯಲ್ಪಟ್ಟಿದ್ದವು ಎಂದರೆ ನನಗೆ ನೆನಪಿಲ್ಲ

ಎನ್ನುತ್ತಾರೆ. ಆರೋಪಿ ಆ ರೀತಿ ನನ್ನ ಯಾವ ಯಾವ ಸಂಬಂಧಿಕರಿಗೆ ಪತ್ರ ಬರೆದಿರುತ್ತಾರೆ ಎಂದರೆ ನನ್ನ ಚಿಕ್ಕಮ್ಮ ಜಯಂತಿ, ಗೀತಾ, ರತಿ, ಉಳಿದವರ ಹೆಸರು ನನಗೆ ನೆನಪಿರುವುದಿಲ್ಲ. ಆರೋಪಿ ಆ ರೀತಿ ಬರೆದಿದ್ದನು ಎನ್ನಲಾದ ಪತ್ರಗಳನ್ನು ನನ್ನ ಸಂಬಂಧಿಕರು ನನಗೆ ಕೊಡುತ್ತಿದ್ದರು.

ಪ್ರಸ್ತುತ ಪ್ರಕರಣ ದಾಖಲು ಮಾಡುವ 6 ತಿಂಗಳು ಮೊದಲಿನಿಂದ ಪತ್ರ ಬರುತ್ತಿದ್ದವು. ಆ ಸಮಯದಲ್ಲಿ ಪತ್ರ ಬರುತ್ತಿದ್ದುದರ ಬಗ್ಗೆ ನಾನು ದೂರು ನೀಡಿರುವುದಿಲ್ಲ. ಆರೋಪಿ ದೂರವಾಣಿಯಲ್ಲಿ ಮಾತನಾಡುತ್ತಿದ್ದಕ್ಕಾಗಿ ಅಥವಾ ಅಂಚೆ ಮೂಲಕ ಪತ್ರ ಬರೆದುದರ ಬಗ್ಗೆ ದೂರು ನೀಡಿರುತ್ತೇನೆ.

ಆರೋಪಿ ನನಗೆ ಯಾವುದೇ ರೀತಿಯ ಆರ್ಥಿಕ ಸಹಾಯ ಮಾಡಿರುವುದಿಲ್ಲ. ಆರೋಪಿತನು ನನ್ನೊಂದಿಗೆ ಯಾವುದೆ ರೀತಿಯ ಸಂಬಂಧ ಹೊಂದಿರುವುದಿಲ್ಲ ಎಂದರೆ ಸರಿ. ನನ್ನ ಖಾಸಗಿ ಫೋಟೋಗಳನ್ನು ಆರೋಪಿ ಯಾವ ಸಮಯದಲ್ಲೂ ತೆಗೆದಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಯೊಂದಿಗೆ ನಿಂತು ಯಾವುದೆ ಫೋಟೋ ತೆಗೆಸಿಕೊಂಡಿರುವುದಿಲ್ಲ. ಆರೋಪಿ ನನ್ನ ಮನೆಗೆ ನುಗ್ಗಿ ಯಾವುದೇ ರೀತಿ ನನ್ನ ಖಾಸಗಿ ಫೋಟೊ ತೆಗೆದಿರುವುದಿಲ್ಲ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರಗಳನ್ನು ಹಾಗೂ ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ. ಸದರಿ ಪತ್ರಗಳಲ್ಲಿ ಅಶ್ಲೀಲವಾದ ಯಾವುದೇ ಫೋಟೋಗಳು ಇರುವುದಿಲ್ಲ ಎಂದರೆ ಸರಿ. ನೀವು ಆರೋಪಿ ಪತ್ರಗಳನ್ನು ಬರೆದಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ಹಾಗೂ ಪತ್ರಗಳನ್ನು ಅಂಚೆಗೆ ಹಾಕಿರುವುದನ್ನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿ ಸುಂದರೇಶ್ ಅವರು ಖುದ್ದಾಗಿ ತಾನೆ ಪತ್ರ ಬರೆಯುತ್ತಿರುವುದರ ಬಗ್ಗೆ ಹೇಳಿರುವುದಿಲ್ಲ.

ಪ್ರಸ್ತುತ ಪ್ರಕರಣ ದಾಖಲಾಗುವ ಸುಮಾರು 15 ದಿನಗಳ ಪೂರ್ವದಲ್ಲಿ ಆರೋಪಿ ಸುಂದರೇಶ್ ಅವರು ತಾನೇ ಪತ್ರ ಬರೆಯುತ್ತಿರುವುದಾಗಿ ನನಗೆ ತಿಳಿಸಿದ್ದರು. ಸದರಿ ಸಂಗತಿಯನ್ನು ನಾನು ನನ್ನ ಚಿಕ್ಕಮ್ಮ ಗೀತಾ, ವಿನೋದಾ ಅವರಿಗೆ ತಿಳಿಸಿದ್ದೆನು. ನನ್ನ ಚಿಕ್ಕಮ್ಮ ಕೇಳಿದಾಗ ಆರೋಪಿಯು ತಾನೆ ಮಾಡಿರುವುದಾಗಿ ತಿಳಿಸಿದ್ದರು.

ನಿಪಿ.1 ರ ದೂರನ್ನು ನಾನು ಜಯಪುರದಲ್ಲಿ ಟೈಪ್ ಮಾಡಿಸಿರುತ್ತೇನೆ. ನಿಪಿ.1 ರ ದೂರನ್ನು ನೀಡುವ ಕಾಲಕ್ಕೆ ಠಾಣೆಗೆ ನಾನು ಒಬ್ಬಳೇ ಹೋಗಿದ್ದೆನು.

ನಿಪಿ.1 ರಲ್ಲಿ ಆಪ್ತರೊಡನೆ ಚರ್ಚಿಸಿ ತಡವಾಗಿ ದೂರು ನೀಡುತ್ತಿರುವುದಾಗಿ ನಮೂದಾಗಿದ್ದು ಆ ರೀತಿ ಯಾವ ಆಪ್ತರೊಡನೆ ಚರ್ಚಿಸಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೀತಾ , ನನ್ನ ತಾಯಿ ವಿನೋದ, ನನ್ನ ತಮ್ಮನಾದ ವಂದಿತ್, ಜಯಂತಿ ಅವರೊಂದಿಗೆ ಚರ್ಚಿಸಿರುತ್ತೇನೆ. ಆ ರೀತಿ ನನ್ನ ಕುಟುಂಬದ 10-15 ಜನರೊಡನೆ ಚರ್ಚಿಸಿ ದೂರು ನೀಡಿರುತ್ತೇನೆ. ಈ ಕುಟುಂಬದವರನ್ನು ಬಿಟ್ಟು ನಾನು ಬೇರೆ ಆಪ್ತರೊಡನೆ ಚರ್ಚಿಸಿರುವುದಿಲ್ಲ ಎಂದರೆ ಸರಿ.

ನನ್ನ ಚಿಕ್ಕಮ್ಮನ ಮನೆಗೆ ಬಂದಿತ್ತು ಎನ್ನಲಾದ ಪತ್ರವನ್ನು ಇಟ್ಟು ದೂರು ನೀಡಲಾಗಿತ್ತು ಎಂದರೆ ಸರಿ. ಆರೋಪಿ ಸುಂದರೇಶ್ ನನಗೆ ಯಾವ ರೀತಿಯಲ್ಲೂ ಸಂಬಂಧಿಕರಾಗಿರುವುದಿಲ್ಲ. ನಿಪಿ.1 ರ ದೂರಿನಲ್ಲಿ ಆರೋಪಿ ಸಂಬಂಧಿಕನೆಂದು ನಮೂದು ಮಾಡಿರುತ್ತೇನೆ ಎಂದರೆ ಸರಿ.

ಯಾವ ಕಾರಣಕ್ಕಾಗಿ ಆರೋಪಿಗೆ ದ್ವೇಷ ಇತ್ತು ಎಂದರೆ ನಾನು ಒಂಟಿಯಾಗಿದ್ದೇನೆ ಎಂದು ಆರೋಪಿಗೆ ದ್ವೇಷ ಇತ್ತು ಎನ್ನುತ್ತಾರೆ. ನನ್ನ ಚಿಕ್ಕಮ್ಮ ಜಯಂತಿಯವರು ಆರೋಪಿ ಪತ್ರ ಬರೆದಿದ್ದ ಎಂಬುದನ್ನು ಖುದ್ದಾಗಿ ನೋಡಿದ್ದರು. ನನಗೆ ಬೇರೆ ಬೇರೆ ಕೈಬರಹದಲ್ಲಿ ಪತ್ರಗಳು ಬರುತ್ತಿದ್ದವು. ಆ ರೀತಿ ಬೇರೆ ಬೇರೆ ಕೈಬರಹದಲ್ಲಿ

ಬಂದಿದ್ದವು ಎನ್ನಲಾದ ಎಷ್ಟು ಪತ್ರಗಳು ಬಂದಿದ್ದವು ಎಂದರೆ ನನಗೆ ಹೇಳಲಾಗುವುದಿಲ್ಲ.

ಆರೋಪಿಯು ಪತ್ರ ಬರೆದರು ಎನ್ನಲಾದ ವಿಳಾಸ ಎನ್ ಆರ್ ಪುರದ ಗಡಿಗೇಶ್ವರ ಆಗಿರುತ್ತದೆ. ಪೋಲಿಸರು ಗಡಿಗೇಶ್ವರಕ್ಕೆ ಹೋದಾಗ ಸದರಿ ಪತ್ರವು ನನ್ನ ಚಿಕ್ಕಮ್ಮನ ಬಳಿಯೇ ಇತ್ತು. 1ನೇ ತಾರೀಖು ಜಯಂತಿಯವರ ಮನೆಯ ಹತ್ತಿರ ಪೋಲಿಸರು ಪತ್ರವನ್ನು ಪಡೆಯುವ ಸಮಯದಲ್ಲಿ ನಾನು ಇದ್ದೆನು. ಅದಕ್ಕೂ ಪೂರ್ವದಲ್ಲಿ ಜಯಂತಿಯವರಿಗೆ ಬಂದಿತ್ತು ಎನ್ನಲಾದ ಪತ್ರವನ್ನು ನಾನು ನೋಡಿರುವುದಿಲ್ಲ ಹಾಗೂ ಅದು ನನ್ನ ಕೈಗೂ ಬಂದಿರಲಿಲ್ಲ ಎಂದರೆ ಸರಿ.

ಜಯಂತಿಯವರಿಗೂ ಹಾಗೂ ಸುಂದರೇಶ ಅವರಿಗೆ ಖುದ್ದು ಪರಿಚಯ ಇರುವುದಿಲ್ಲ ಎಂದರೆ ಸರಿ."

11. ಚಾಸಾ.1 ರವರ ಮೇಲ್ಕಂಡ ಒಪ್ಪಿತಾಂಶವನ್ನು ಪರಿಶೀಲಿಸಿದಾಗ ಸದರಿ ಪ್ರಕರಣ ದಾಖಲಾಗುವ ಕಾಲಕ್ಕೆ ತಾನು ಏರ್ ಟೆಲ್ ಕಂಪನಿಯ ಮೊಬೈಲ್ ಅನ್ನು ಬಳುಸುತ್ತಿದ್ದೆನು ಎಂಬುದಾಗಿ, ಸದರಿ ಮೊಬೈಲ್ ಮೂಲಕ ಜಯಪುರ ಠಾಣೆಯ ಯಾವ ಯಾವ ಸಿಬ್ಬಂದಿಗಳೊಂದಿಗೆ ಮಾತನಾಡಿರುತ್ತೀರಾ ಎಂದರೆ ಯಾವ ಸಿಬ್ಬಂದಿಗಳೊಂದಿಗೂ ಮಾತನಾಡಿರುವುದಿಲ್ಲವೆಂದು ನುಡಿದಿದ್ದು, ಪ್ರಕರಣದ ಆರೋಪಿ ತನಗೆ ಚಿಕ್ಕ ವಯಸ್ಸಿನಿಂದಲೂ ಪರಿಚಯ ಇದ್ದರು ಎಂಬುದಾಗಿ ನುಡಿದಿರುವ ಅಂಶವನ್ನು ಪರಿಶೀಲಿಸಿದಾಗ ಆರೋಪಿತನು ಬಹಳ ವರ್ಷಗಳಿಂದ ಚಾಸಾ.1 ರವರಿಗೆ ಪರಿಚಯವಿರುವುದಾಗಿ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೇ ತಾನು ಹಾಗೂ ಆರೋಪಿ ಒಂದೇ ಸಮುದಾಯದವರಾಗಿರುತ್ತಾರೆ ಎಂಬುದಾಗಿಯೂ ಸಹ ಒಪ್ಪಿರುತ್ತಾರೆ. ಅಲ್ಲದೇ ತನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಸಿ.ಸಿ. ನಂಬರ್ 34/2021 ರಂತೆ ತನ್ನ ವಿರುದ್ದ ಆರೋಪಿ

ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಸದರಿ ಅಂಶವನ್ನು ಪರಿಶೀಲಿಸಿದಾಗ ಚಾಸಾ.1 ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುವುದು ಕಂಡು ಬರುತ್ತದೆ ಹಾಗೂ ಸದರಿ ಪ್ರಕರಣದಲ್ಲಿ ಆರೋಪಿ ತನ್ನೊಂದಿಗೆ 2 ನೇ ಆರೋಪಿಯಾಗಿರುತ್ತಾರೆ ಎಂಬುದಾಗಿ ಸಹ ಒಪ್ಪಿರುತ್ತಾರೆ. ತನ್ನ ಹಾಗೂ ಆರೋಪಿಯ ನಡುವೆ ಯಾವುದೇ ದ್ವೇಷ ಹಾಗೂ ಭಿನ್ನಾಭಿಪ್ರಾಯ ಇರುವುದಿಲ್ಲ ಎಂಬುದಾಗಿಯೂ ಒಪ್ಪಿರುತ್ತಾರೆ. ತಾನು ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಲು ಯಾವುದೇ ನಿರ್ದಿಷ್ಟ ಕಾರಣ ಇರುವುದಿಲ್ಲ ಎಂದರೆ ತುಂಬಾ ಕಾರಣಗಳು ಇರುತ್ತವೆ ಎಂಬುದಾಗಿ ನುಡಿದಿದ್ದು, ಆ ರೀತಿ ಯಾವ ಕಾರಣಗಳು ಇರುತ್ತವೆ ಎಂಬ ಪ್ರಶ್ನೆಗೆ ಆರೋಪಿಯು ತಮ್ಮ ಪಕ್ಕದ ಮನೆಯವರಾಗಿದ್ದರಿಂದ ಫೋನ್ ನ ಸಂಭಾಷಣೆಯಲ್ಲಿ ಬೇರೆ ರೀತಿಯ ಟಾರ್ಚರ್ ಮಾಡಲು ಶುರು ಮಾಡಿದ್ದರು ಎಂಬುದಾಗಿ, ಆದ್ದರಿಂದ ತಾನು ಪ್ರಕರಣ ದಾಖಲು ಮಾಡಿರುವುದಾಗಿ ನುಡಿದಿರುತ್ತಾರೆ. ಸದರಿ ಅಂಶವನ್ನು ಪರಿಶೀಲಿಸಿದಾಗ ಚಾಸಾ.1 ರವರು ಹಲವಾರು ಕಾರಣಗಳು ಇರುತ್ತವೆ ಎಂಬುದಾಗಿ ನುಡಿದಿದ್ದು ನಿರ್ದಿಷ್ಟವಾಗಿ ಇಂತಹದೇ ಕಾರಣವೆಂಬುದಾಗಿ ಎಲ್ಲೂ ಸಹ ನುಡಿದಿರುವುದಿಲ್ಲ. ಫೋನಿನಲ್ಲಿ ಟಾರ್ಚರ್ ಮಾಡುತ್ತಿದ್ದರು ಎಂಬುದಾಗಿ ನುಡಿದಿದ್ದು, ಯಾವ ರೀತಿ ತೊಂದರೆ ನೀಡಿದ್ದರು ಎಂಬ ಬಗ್ಗೆ ನಿಖರವಾಗಿ ನುಡಿದಿರುವುದಿಲ್ಲ. ಈ ರೀತಿ ಆರೋಪಿ ತನ್ನೊಂದಿಗೆ ಫೋನ್ ಮೂಲಕ ಸಂಭಾಷಣೆ ಮಾಡುತ್ತಿದ್ದಾಗ ತಾನು ಅಡಿಗೆಬೈಲಿನಲ್ಲಿ ಇರಲಿಲ್ಲ, ಜಯಪುರದಲ್ಲಿ ಇರುವುದಾಗಿ ಒಪ್ಪಿರುತ್ತಾರೆ. ತನಗೆ ಆರೋಪಿ ಫೋನ್ ಮಾಡುತ್ತಿದ್ದ ಎಂದು ನುಡಿದಿದ್ದು, ಅದೇ ರೀತಿ ತನ್ನ

ಬಾಡಿಗೆದಾರರಿಗೂ ಸಹಾ ಫೋನ್ ಮಾಡುತ್ತಿದ್ದು, ಸದರಿ ಮಾಲೀಕರಾದ ಚಂದ್ರಶೇಖರ್ ರವರು ಆರೋಪಿ ವಿರುದ್ಧ ದೂರು ದಾಖಲಿಸುವಂತೆ ತಿಳಿಸಿದ್ದರು ಎಂಬುದಾಗಿ ನುಡಿದಿದ್ದು, ಸದರಿ ಅಂಶವನ್ನು ಪರಿಶೀಲಿಸಿದಾಗ ಚಂದ್ರಶೇಖರ್ ಎಂಬುವವರು ಹೇಳಿದ ಆಧಾರದ ಮೇಲೆ ಚಾಸಾ.1 ರವರು ದೂರು ದಾಖಲಿಸಿರುವುದಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ. ಅಲ್ಲದೇ ಆರೋಪಿತನಿಂದ ತನ್ನ ತಂದೆ-ತಾಯಿ, ಸಹೋದರ ಹಾಗೂ ಸಹೋದರಿಗೆ ಕಾಗದ ಬರುತ್ತಿತ್ತು ಎಂಬುದಾಗಿ ಹಾಗೂ ಸದರಿ ಸಂಗತಿಯನ್ನು ಆರೋಪಿಯೇ ತನಗೆ ತಿಳಿಸಿದ್ದರು ಎಂಬುದಾಗಿ, ಆ ರೀತಿ ಆರೋಪಿ ಬರೆದ ಪತ್ರಗಳನ್ನು ತಾನು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ ಎಂಬುದಾಗಿ ನುಡಿದಿದ್ದು, ಆ ರೀತಿ ಒಟ್ಟು ಎಷ್ಟು ಪತ್ರಗಳು ಬರೆಯಲ್ಪಟ್ಟಿದ್ದವು ಎಂದರೆ ತನಗೆ ನೆನಪಿರುವುದಿಲ್ಲವೆಂದು ನುಡಿದ ಅಂಶವನ್ನು ಪರಿಶೀಲಿಸಿದಾಗ ಕೃತ್ಯದ ಬಗ್ಗೆ ಹಾಗೂ ಚಾಸಾ.1 ರವರ ಹೇಳಿಕೆ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಒಂದು ವೇಳೆ ಆರೋಪಿಯು ಆ ರೀತಿ ಪತ್ರವನ್ನು ಬರೆದಿದ್ದ ಪಕ್ಷದಲ್ಲಿ ಯಾವ ಕಾರಣಕ್ಕಾಗಿ ಸದರಿ ಪತ್ರವನ್ನು ತನಿಖಾಧಿಕಾರಿಗಳ ಮುಂದೆ ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂಬ ಬಗ್ಗೆ ಕೃತ್ಯ ಸಂಬಂಧಿಸಿದಂತೆ ಸಂಶಯ ವ್ಯಕ್ತವಾಗುತ್ತದೆ.

12. ಅಲ್ಲದೇ ಚಾಸಾ.1 ರವರು ತನ್ನ ಸಂಬಂಧಿಕರಿಗೂ ಆರೋಪಿತನು ಪತ್ರ ಬರೆದಿರುತ್ತಾರೆ ಎಂಬುದಾಗಿ, ಸದರಿಯವರು ತನ್ನ ಚಿಕ್ಕಮ್ಮ ಜಯಂತಿ, ಗೀತಾ, ರತಿ, ಉಳಿದವರ ಹೆಸರು ತನಗೆ ನೆನಪಿರುವುದಿಲ್ಲವೆಂದು ನುಡಿದಿದ್ದು, ಹಾಗೂ ಆರೋಪಿ ಆ ರೀತಿ ಬರೆದಿದ್ದನು ಎನ್ನಲಾದ ಪತ್ರಗಳನ್ನು ತನ್ನ ಸಂಬಂಧಿಕರು ತನಗೆ

ಕೊಡುತ್ತಿದ್ದರು ಎಂಬುದಾಗಿ ನುಡಿದಿದ್ದು, ಪ್ರಸ್ತುತ ಪ್ರಕರಣ ದಾಖಲು ಮಾಡುವ 6 ತಿಂಗಳ ಮೊದಲಿನಿಂದಲೂ ಪತ್ರ ಬರುತ್ತಿದ್ದವು, ಆ ಸಮಯದಲ್ಲಿ ಪತ್ರ ಬರುತ್ತಿದ್ದುದರ ಬಗ್ಗೆ ತಾನು ದೂರು ನೀಡಿರುವುದಿಲ್ಲ ಎಂಬುದಾಗಿ ನುಡಿದ ಅಂಶಗಳನ್ನು ಪರಿಶೀಲಿಸಿದಾಗ ಯಾವ ಕಾರಣದಿಂದ ಚಾಸಾ.1 ರವರು ಆ ರೀತಿ ಆರೋಪಿತನಿಂದ ಪತ್ರಗಳು ಬಂದ ನಂತರದಲ್ಲೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡದೇ ಇರುವುದು ಸಹ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಅಲ್ಲದೇ ಆರೋಪಿ ದೂರವಾಣಿಯಲ್ಲಿ ಮಾತಾಡಿದ್ದಾಕ್ಕಾಗಿ ಅಥವಾ ಅಂಚೆ ಮೂಲಕ ಪತ್ರ ಬರೆದಿದ್ದರ ಬಗ್ಗೆ ದೂರು ನೀಡಿರುವುದಾಗಿ, ಆರೋಪಿ ತನಗೆ ಯಾವುದೇ ರೀತಿಯ ಆರ್ಥಿಕ ಸಹಾಯ ಮಾಡಿರುವುದಿಲ್ಲ ಹಾಗೂ ಆರೋಪಿತನು ತನ್ನೊಂದಿಗೆ ಯಾವುದೇ ರೀತಿಯ ಸಂಬಂಧ ಹೊಂದಿರುವುದಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಅಲ್ಲದೇ ತನ್ನ ಖಾಸಗಿ ಪೋಟೋಗಳನ್ನು ಆರೋಪಿ ಯಾವ ಸಮಯದಲ್ಲೂ ತೆಗೆದಿರುವುದಿಲ್ಲ ಎಬುದಾಗಿಯೂ ಸಹ ಬಹಳ ಸ್ಪಷ್ಟವಾಗಿ ಒಪ್ಪಿರುತ್ತಾರೆ. ತಾನು ಆರೋಪಿಯೊಂದಿಗೆ ನಿಂತು ಯಾವುದೇ ಪೋಟೋ ತೆಗೆಸಿಕೊಂಡಿರುವುದಿಲ್ಲ. ಆರೋಪಿ ತನ್ನ ಮನೆಗೆ ನುಗ್ಗಿ ಯಾವುದೇ ರೀತಿಯ ತನ್ನ ಖಾಸಗಿ ಪೋಟೊ ತೆಗೆದಿರುವುದಿಲ್ಲ ಎಂಬುದಾಗಿ, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರಗಳನ್ನು ನೋಡಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಚಾಾ.1 ರವರು ನೋಡಿರುವುದಾಗಿ ನುಡಿದಿದ್ದು, ಸದರಿ ಪತ್ರಗಳಲ್ಲಿ ಅಶ್ಲೀಲವಾದ ಯಾವುದೇ ಪೋಟೋಗಳು ಇರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಅಲ್ಲದೇ ಆರೋಪಿಯು ತನಗೆ ಪತ್ರಗಳನ್ನು ಬರೆದಿರುವುದನ್ನು ತಾನು ಖುದ್ದಾಗಿ

ನೋಡಿರುವುದಿಲ್ಲ ಎಂಬುದಾಗಿ ಒಪ್ಪಿರುತ್ತಾರೆ. ಹೀಗಿರುವುದಲ್ಲಿ ಆರೋಪಿಯೇ ಸದರಿ ಪತ್ರಗಳನ್ನು ಚಾಸಾ.1 ರವರಿಗೆ ಬಯುತ್ತಿದ್ದರು ಎಂಬುದರ ಬಗ್ಗೆ ಯಾವುದೇ ಪೂರಕವಾದ ಅಂಶ ಹೊರಬಂದಿರುವುದಿಲ್ಲ. ಅಲ್ಲದೇ ಸದರಿ ಪತ್ರಗಳನ್ನು ಅಂಚೆಗೆ ಆರೋಪಿ ಹಾಕಿರುವುದನ್ನು ಖುದ್ದಾಗಿ ನೋಡಿರುವುದಿಲ್ಲ ಎಂಬುದಾಗಿ ಒಪ್ಪಿದ್ದು, ಅಲ್ಲದೇ ಆರೋಪಿ ಪತ್ರ ಬರೆಯುತ್ತಿರುವುದರ ಬಗ್ಗೆ ಹೇಳಿರುವುದಿಲ್ಲ ಎಂಬುದಾಗಿ ಸಹ ಒಪ್ಪಿದ್ದು, ಪ್ರಸ್ತುತ ಪ್ರಕರಣ ದಾಖಲಾಗುವ ಸುಮಾರು 15 ದಿನಗಳ ಪೂರ್ವದಲ್ಲಿ ಆರೋಪಿ ತನಗೆ ಪತ್ರ ಬರೆಯುತ್ತಿರುವುದಾಗಿ ತಿಳಿಸಿದ್ದರು ಎಂಬುದಾಗಿ ನುಡಿದಿದ್ದು, ಸದರಿ ಸಂಗತಿಯನ್ನು ತಾನು ತನ್ನ ಚಿಕ್ಕಮ್ಮ ಗೀತಾ, ವಿನೋದರವರಿಗೆ ತಿಳಿಸಿರುವುದಾಗಿ ಹಾಗೂ ತನ್ನ ಚಿಕ್ಕಮ್ಮ ಕೇಳಿದಾಗ ಆರೋಪಿಯು ತಾನೇ ಮಾಡಿರುವುದಾಗಿ ತಿಳಿಸಿದ್ದರು ಎಂಬುದಾಗಿ ನುಡಿದಿರುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನಿಪಿ.1 ನ್ನು ಪರಿಶೀಲಿಸಿದಾಗ ಚಾಸಾ.1 ರವರು ಹೇಳಿದಂತಹ ಅಂಶಗಳು ನಿಪಿ.1 ರಲ್ಲಿ ನಮೂದನೆ ಇಲ್ಲದೇ ಇರುವುದು ಸಹ ಕೃತ್ಯಕ್ಕೆ ಸಂಬಂಧಿಸಿದಂತೆ ಸಂಶಯ ವ್ಯಕ್ತವಾಗುತ್ತದೆ.

13. ಅಲ್ಲದೇ ಚಾಸಾ.1 ರವರು ದೂರನ್ನು ನೀಡುವ ಕಾಲಕ್ಕೆ ತಾನು ಒಬ್ಬಳೇ ಹೋಗಿರುವುದಾಗಿ, ಸದರಿ ನಿಪಿ.1 ದೂರನ್ನು ತಾನು ಜಯಪುರದಲ್ಲಿ ಟೈಪ್ ಮಾಡಿಸಿರುವುದಾಗಿ ನುಡಿದಿದ್ದು, ನಿಪಿ.1 ದೂರನ್ನು ತಡವಾಗಿ ನೀಡಿರುವುದಾಗಿ, ಸದರಿ ವಿಳಂಬದ ಬಗ್ಗೆ ಕಾರಣವು ತನ್ನ ಆಪ್ತರೊಡನೆ ಚರ್ಚಿಸಿ ತದನಂತರದಲ್ಲಿ ನೀಡಿರುವುದಾಗಿ ನುಡಿದಿದ್ದು, ಆ ರೀತಿ ತನ್ನ ಕುಟುಂಬದ 10-15 ಜನರೊಡನೆ ಚರ್ಚಿಸಿ ದೂರು ನೀಡಿರುತ್ತೇನೆ ಎಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಿದಾಗ

Visit **ecourts.gov.in** for updates or download mobile app "**eCourts Services**" from Android or iOS

ನಿಪಿ.1, ದೂರನ್ನು ನೀಡಲು ಆದ ವಿಳಂಬದ ಬಗ್ಗೆ ಸ್ಪಷ್ಟವಾಗಿ ನುಡಿಯದೇ ಇರುವುದು ಹಾಗೂ ಸದರಿ ದೂರನ್ನು ವಿಳಂಬವಾಗಿ ದಾಖಲಿಸಿರುವುದನ್ನು ನಿಪಿ.1 ರಲ್ಲಿ ಸದರಿ ವಿಳಂಬದ ಬಗ್ಗೆ ನಮೂದನೆ ಇಲ್ಲದೇ ಇರುವುದು ಕೃತ್ಯ ಸಂಬಂಧಿಸಿದಂತೆ ಸಂಶಯ ವ್ಯಕ್ತವಾಗುತ್ತದೆ.

14. ಅಲ್ಲದೇ, ಚಾಸಾ.1 ರವರು ಆರೋಪಿ ತನ್ನ ಸಂಬಂಧಿಕರು ಎಂಬುದಾಗಿ ಒಂದು ಬಾರಿ ನುಡಿದಿದ್ದು, ಮತ್ತೊಂದು ಬಾರಿ ಆತನು ತನ್ನ ಸಂಬಂಧಿಕರಲ್ಲ ಎಂಬುದಾಗಿ ದ್ವಂಧ ರೀತಿಯ ಹೇಳಿಕೆಯನ್ನು ನುಡಿದಿರುವುದನ್ನು ಪರಿಶೀಲಿಸಲಾಗಿ ಹಾಗೂ ನಿಪಿ.1 ದೂರನ್ನು ಪರಿಶೀಲಿಸಲಾಗಿ ಚಾಸಾ.1 ರವರು ನುಡಿದಿರುವ ಅಂಶಕ್ಕೂ ನಿಪಿ.1 ದೂರಿನಲ್ಲಿ ನಮೂದಿರುವ ಅಂಶಕ್ಕೂ ಸಾಕಷ್ಟು ವ್ಯತ್ಯಾಸಗಳು ಕಂಡು ಬರುತ್ತದೆ. ಸದರಿ ಅಂಶದಿಂದಲೂ ಸಹ ಕೃತ್ಯಕ್ಕೆ ಸಂಬಂಧಿಸಿದಂತೆ ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ತನ್ನ ಚಿಕ್ಕಮ್ಮ ಜಯಂತಿಯವರು ಆರೋಪಿ ಪತ್ರ ಬರೆದಿದ್ದ ಎಂಬುದನ್ನು ಖುದ್ದಾಗಿ ನೋಡಿದ್ದರು ಎಂಬುದಾಗಿ ನುಡಿದಿದ್ದು, ತನಗೆ ಬೇರೆ ಬೇರೆ ಕೈಬರಹದಲ್ಲಿ ಪತ್ರಗಳು ಬರುತ್ತಿದ್ದವು ಎಂಬುದಾಗಿ, ಆ ರೀತಿ ಬೇರೆ ಬೇರೆ ಕೈಬರಹದಲ್ಲಿ ಬಂದಿದ್ದವು ಎನ್ನಲಾದ ಎಷ್ಟು ಪತ್ರಗಳು ಬಂದಿದ್ದವು ಎಂದರೆ ತನಗೆ ಹೇಳಲಾಗುವುದಿಲ್ಲ ಎಂದು ನುಡಿದ ಅಂಶವನ್ನು ಪರಿಶಿಲಿಸಿದಾಗ ಚಾಸಾ.1 ರವರು ತನಗೆ ಬರುತ್ತಿದ್ದ ಪತ್ರಗಳು ಬೇರೆ ಬೇರೆ ಕೈ ಬರವಣಿಗೆಯಿಂದ ಕೂಡಿತ್ತು ಎಂಬುದಾಗಿ ನುಡಿದಿದ್ದರಿಂದ ಆರೋಪಿತನೇ ಸದರಿ ಪತ್ರಗಳನ್ನು ಬರೆಯುತ್ತಿದ್ದನು ಎಂದು ಎಲ್ಲೂ ಸಹ ಸ್ಪಷ್ಟತೆ ಕಂಡು ಬಂದಿಲ್ಲ. ಆರೋಪಿಯು ಪತ್ರ ಬರೆದರು ಎನ್ನಲಾದ ವಿಳಾಸ ಎನ್.ಆರ್.ಪುರದ ಗಡಿಗೇಶ್ವರ

Visit **ecourts.gov.in** for updates or download mobile app "**eCourts Services**" from Android or iOS

ಆಗಿರುತ್ತದೆ ಎಂಬುದಾಗಿ, ಪೋಲಿಸರು ಗಡಿಗೇಶ್ವರಕ್ಕೆ ಹೋದಾಗ ಸದರಿ ಪತ್ರವು ತನ್ನ ಚಿಕ್ಕಮ್ಮನ ಬಳಿಯೇ ಇತ್ತು ಎಂಬುದಾಗಿ, 1 ನೇ ತಾರೀಖು ಜಯಂತಿಯವರ ಮನೆಯ ಹತ್ತಿರ ಪೋಲಿಸರು ಪತ್ರವನ್ನು ಪಡೆಯುವ ಸಮಯದಲ್ಲಿ ತಾನು ಇದ್ದೆನು ಎಂಬುದಾಗಿ ನುಡಿದಿದ್ದು, ಅದಕ್ಕೂ ಪೂರ್ವದಲ್ಲಿ ಜಯಂತಿಯವರಿಗೆ ಬಂದಿತ್ತು ಎನ್ನಲಾದ ಪತ್ರವನ್ನು ತಾನು ನೋಡಿರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಅಲ್ಲದೇ ಸದರಿ ಜಯಂತಿಯವರಿಗೂ ಹಾಗೂ ಆರೋಪಿಗೆ ಖುದ್ದು ಪರಿಚಯ ಇರುವುದಿಲ್ಲ ಎಂಬುದಾಗಿ ನುಡಿದ ಅಂಶವನ್ನು ಪರಿಶೀಲಿಸಲಾಗಿ ಕೃತ್ಯ ಘಟಸಿದ್ದರ ಬಗ್ಗೆ ಸಾಕಷ್ಟು ಸಂಶಯ ವ್ಯಕ್ತವಾಗುತ್ತದೆ. ಅಲ್ಲದೇ ಆರೋಪಿತನೇ ಪತ್ರಗಳನ್ನು ಬರೆಯುತ್ತಿದ್ದ ಎಂಬುದರ ಬಗ್ಗೆ ಮುದ್ದೆ ಮಾಲುಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದು ಸಹ ಕೃತ್ಯಕ್ಕೆ ಸಂಬಂಧಿಸಿದಂತೆ ಸಂಶಯ ವ್ಯಕ್ತವಾಗುತ್ತದೆ.

15. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ-4/ಪ್ರಾಸಾ-2 ಕೃಷ್ಣಪ್ಪ, ಚಾಸಾ.2/ಪ್ರಾಸಾ.3 ಗಿರಿಯಪ್ಪ, ಚಾಸಾ.3/ಪ್ರಾಸಾ.4 ಸುಧಾಕರ ರವರು ಕೃತ ನಡೆದ ಸ್ಥಳ ಮತ್ತು ಅಮಾನತ್ತು ಮಹಜರ್ ಕಾಲದ ಪಂಚರಾಗಿ ಹಾಜರಿದ್ದು ಪಂಚ ಸಾಕ್ಷಿದಾರರಾಗಿರುತ್ತಾರೆ. ಚಾಸಾ.4/ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾಹನ ಅಮಾನತು ಮಹಜರನ್ನು ನಿಪಿ.2 ಹಾಗೂ ತನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿ, ಸದರಿ ದಾಖಲೆಗೆ ತಾನು

Visit **ecourts.gov.in** for updates or download mobile app "**eCourts Services**" from Android or iOS

ಎಲ್ಲಿ, ಯಾವಾಗ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲವೆಂದು, ನಿಪಿ.2 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲವೆಂದು, ತನ್ನ ಸಮಕ್ಷಮ ಯಾವುದೇ ವಾಹನವನ್ನು ಪೋಲಿಸರು ವಶಕ್ಕೆ ಪಡೆದಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತಂದಿರುವುದಿಲ್ಲ.

16. ಚಾಸಾ.2/ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ಥಳ ಮಹಜರನ್ನು ನಿಪಿ.3 ಎಂದು, ತನ್ನ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಿ, ನಿಪಿ.3 ಕ್ಕೆ ತಾನು ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆಂತಲೂ, ನಿಪಿ.3 ರಲ್ಲಿರುವ ವಿಚಾರ ತನಗೆ ಗೊತ್ತಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯು ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿ ಸದರಿ ಪೋಟೋಗಳನ್ನು ನಿಪಿ.4 ರಿಂದ ನಿಪಿ.7 ಎಂದು, ಸಿ.ಡಿ.ಅನ್ನು ನಿಪಿ.8 ಎಂದು ಗುರುತಿಸಿ, ಸದರಿ ಪೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿರುತ್ತದೆ ಎಂದು ಗೊತ್ತಿಲ್ಲವೆಂದು, ಪೋಲಿಸರ ಕೋರಿಕೆ ಮೇರೆಗೆ ಸದರಿ ಪೋಟೋಗಳಲ್ಲಿ ನಿಂತಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಹೊರತಂದಿರುವುದಿಲ್ಲ. ಚಾಸಾ.3/ಪ್ರಾಸಾ.4

Visit **ecourts.gov.in** for updates or download mobile app “**eCourts Services**” from Android or iOS

ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸ್ಥಳಮಹಜರನ್ನು ನಿಪಿ.3 ಎಂದು, ತನ್ನ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಿ, ನಿಪಿ.3 ಕ್ಕೆ ತಾನು ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆಂದು, ನಿಪಿ.3 ರಲ್ಲಿರುವ ವಿಚಾರ ತನಗೆ ಗೊತ್ತಿರುವುದಿಲ್ಲವೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು 4 ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರತಂದಿರುವುದಿಲ್ಲ.

17. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ-10/ಪ್ರಾಸಾ-5 ಪ್ರಸನ್ನ ರವರು ಸಾಂಧರ್ಬಿಕ ಸಾಕ್ಷಿಯಾಗಿರುತ್ತಾರೆ. ಚಾಸಾ.10/ ಪ್ರಾಸಾ-5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಸಾಕ್ಷಿದಾರರು ತನಗೆ ಗೊತ್ತಿಲ್ಲವೆಂದು, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತಿರುವುದಿಲ್ಲವೆಂದು, ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರತಂದಿರುವುದಿಲ್ಲ. ಸದರಿ ಸಾಕ್ಷಿಗೆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ಹೇಳಿದ್ದು, ಸಾಕ್ಷಿಯು ಹೇಳಿಕೆಯ ಭಾಗವನ್ನು

Visit **ecourts.gov.in** for updates or download mobile app “**eCourts Services**” from Android or iOS

ಸಂಪೂರ್ಣವಾಗಿ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.9 ಎಂದು ಗುರುತಿಸಲಾಯಿತು.

18. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ-9/ಪ್ರಾಸಾ-6 ಗೌತಮ್ ರವರು ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾರೆ. ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ 1 ರಿಂದ 8, ಚಾಸಾ 10 ರಿಂದ 14 ರವರು ತನಗೆ ಗೊತ್ತು ಎಂದು, ತನಗೆ ಆರೋಪಿಯ ಪರಿಚಯ ಇರುತ್ತದೆಂದು ನುಡಿದಿರುತ್ತಾರೆ. ಚಾಸಾ 1 ತನ್ನ ದೊಡ್ಡಮ್ಮನ ಮಗಳು ಎಂದು, ಚಾಸಾ.1 ರವರ ಬಗ್ಗೆ ಕೆಟ್ಟ ಪದಗಳಿಂದ ಬೈದು ಬೆದರಿಕೆ ಹಾಕಿ, ತಮ್ಮ ಮನೆಯ ಎದುರುಗಡೆ ಹಾಕಿದ್ದರೆಂತಲೂ, ನಂತರ ತನ್ನ ತಾಯಿ ಬಂದು ನೋಡಿ ತನಗೆ ಸದರಿ ವಿಚಾರವನ್ನು ತಿಳಿಸಿದರೆಂತಲೂ, ನಂತರ ಚಾಸಾ.1 ರವರಿಗೆ ಫೋನ್ ಮಾಡಿ ಸದರಿ ಚೀಟಿ ಅಂಟಿಸಿರುವ ವಿಚಾರ ತಿಳಿಸಿದರೆಂತಲೂ, ನಂತರ ಚಾಸಾ 1 ರವರು ಠಾಣೆಗೆ ಹೋಗಿ ದೂರು ನೀಡಿದರೆಂತಲೂ, ಪೋಲಿಸರು ತನ್ನ ಹೇಳಿಕೆಯನ್ನು ಪಡೆದಿರುತ್ತಾರೆಂತಲೂ, ಆರೋಪಿ ಬೈಕ್ ಸಂಖ್ಯೆ ಕೆಎ-18/4603 ದ್ವಿಚಕ್ರ ವಾಹನದಲ್ಲಿ ಹಾಕಿ ಹೋಗಿರುವುದನ್ನು ತಾನು ಕಣ್ಣಾರೆ ನೋಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನ್ಯಾಯಾಲಯದ ಮುಂದಿರುವ 3 ಕರಪತ್ರಗಳನ್ನು ನೋಡಿ ಗುರುತಿಸಿ, ಅವುಗಳನ್ನು ಮುದ್ದೆ ಮಾಲು.1 ರಿಂದ 3 ಎಂದು ಗುರುತಿಸಿಕೊಂಡಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು

ಪರಿಗಣಿಸಿ ಪಾಟೀ ಸವಾಲು ಮಾಡಿ, ದಿಃ01/12/2019 ರಂದು ಸಂಜೆ 6 ಗಂಟೆ ಸಮಯದಲ್ಲಿ ತಮ್ಮ ಮನೆ ಮುಂದೆ ಆರೋಪಿಯು ಚಾಸಾ 1 ರವರ ಫೋಟೋ ಇರುವ, ಆಕೆಯ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ಕೆಟ್ಟದಾಗಿ ಬರೆದಿರುವ ಕರಪತ್ರವನ್ನು ಅಂಟಿಸಿದ್ದರು ಎಂಬುದಾಗಿ ನುಡಿಸಿಕೊಂಡಿರುತ್ತಾರೆ.

19. ಸದರಿ ಸಾಕ್ಷಿಯನ್ನು ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿದ ಪಾಟೀ ಸವಾಲಿನಲ್ಲಿಃ

**"ಚಾಸಾ-1 ನನಗೆ ದೊಡ್ಡಮ್ಮನ ಮಗಳು ಎಂದರೆ ಸರಿ. 2019 ನೇ ಸಾಲಿನಲ್ಲಿ ಚಾಸಾ-1 ರವರು ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ಹಾಗೂ ಆರೋಪಿ ನಡುವೆ ಭಿನ್ನಾಬಿಪ್ರಾಯ ಇದ್ದ ಬಗ್ಗೆ ನನಗೆ ಗೊತ್ತಿಲ್ಲ.**

**ದಿನಾಂಕ 01.12.2019 ರಂದು ನಾನು ತೋಟದಲ್ಲಿದ್ದೆನು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ 2019 ರಲ್ಲಿ ಆರೋಪಿ ಹಾಕಿದ್ದ ಕರಪತ್ರಗಳನ್ನು ನಾನು ಖುದ್ದು ನೋಡಿರುತ್ತೇನೆ. ಆ ದಿನ ಹಾಕಿದ್ದ ಬಟ್ಟೆಯ ಬಣ್ಣ ಗೊತ್ತಿಲ್ಲ. ಆ ದಿನ ದ್ವಿಚಕ್ರ ವಾಹನ ಸಂಃ ಕೆ.ಎ 18 4603 ಆಗಿರುತ್ತದೆ. ಆ ಸಮಯದಲ್ಲಿ ನಾನೊಬ್ಬನೇ ಸ್ಥಳದಲ್ಲಿ ಇದ್ದೆನು. ನಮ್ಮ ಮನೆಗೂ ಹಾಗೂ ತೋಟಕ್ಕೂ 10 ಅಡಿ ಅಂತರವಿತ್ತು.**

**ಆರೋಪಿ ನನಗೆ ಸಂಬಂಧಿಕರಾಗಿರುವುದಿಲ್ಲ. ಆರೋಪಿಯನ್ನು ಈ ಪೂರ್ವದಲ್ಲಿ ನೋಡಿದ್ದೀರಾ ಎಂದರೆ ಆತ ನಮ್ಮ ದೊಡ್ಡಮ್ಮನ ಮಗ ಎಂದು ನುಡಿಯುತ್ತಾರೆ. ಆರೋಪಿ 2019 ರಲ್ಲಿ ಬಾಳೆಹೊನ್ನೂರು ಠಾಣೆಗೆ ದೂರು ನೀಡಿರುವ ಬಗ್ಗೆ**

ನನಗೆ ಗೊತ್ತಿರುವುದಿಲ್ಲ. ಬಾಳೆಹೊನ್ನೂರು ಠಾಣೆಯಲ್ಲಿ ನನ್ನನ್ನು ಕರೆದು ವಿಚಾರ ಮಾಡಿದ್ದರು ಎಂದರೆ ಸರಿ. ನಾನು ಹಲ್ಲೆ ಮಾಡಿದ ವಿಚಾರವಾಗಿ ಸದರಿ ದೂರನ್ನು ನೀಡಿದ್ದರು ಎಂದು ನುಡಿಯುತ್ತಾರೆ.

ಆ ರೀತಿ ಏನೇನು ಹಾಕಿದ್ದರು ಎಂದರೆ ಚೀಟಿಯನ್ನು ಹಾಕಿದ್ದರು ಒಂದು ಮನೆ ಬಳಿ, ರಸ್ತೆ ಬಳಿ ಮತ್ತು ಮತ್ತೊಂದು ಪತ್ರವನ್ನು ಗಡಿಗೇಶ್ವರ ಬಳಿ ಹಾಕಿದ್ದರು. ಆ ಸಮಯದಲ್ಲಿ ನಾನು ತೋಟದಲ್ಲಿ ಇದ್ದೆ ಎಂದರೆ ಸರಿ. ತೋಟಕ್ಕೂ ಹಾಗೂ ಗಡಿಗೇಶ್ವರಕ್ಕೆ ಸುಮಾರು 2 ಕೀ.ಮೀ. ಹಂತರವಿರುತ್ತದೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ಕಡೆ ನಿಂತರೆ 2.ಕೀ.ಮೀ. ದೂರದಲಿ ನಡೆಯುವ ಘಟನೆ ಗೊತ್ತಾಗುವುದಿಲ್ಲ ಎಂದರೆ ಸರಿ.

ನಾನು ತೋಟದಲ್ಲಿ ಇದ್ದರಿಂದ ಗಡಿಗೇಶ್ವರದಲ್ಲಿ ಏನು ನಡೆಯಿತು ಎಂದು ಗೊತ್ತಾಗಿರುವುದಿಲ್ಲ ಎಂದರೆ ಸರಿ. ಸದರಿ ಕರಪತ್ರಗಳನ್ನು ನನ್ನ ತಾಯಿ ನನಗೆ ತಂದು ಕೊಟ್ಟರು. ಆ ರೀತಿ ಎಷ್ಟು ಕರಪತ್ರಗಳನ್ನು ತಂದು ಕೊಟ್ಟರು ಎಂದರೆ ಒಂದು ಕರಪತ್ರ ತಂದು ಕೊಟ್ಟರು. ಸದರಿ ಕರ ಪತ್ರ ಜೆರಾಕ್ಸ್ ಮಾಡಿ ಕರ ಪತ್ರವಾಗಿತ್ತು ಎಂದು ನುಡಿಯುತ್ತಾರೆ.

ಆರೋಪಿಯೇ ಸದರಿ ಕರಪತ್ರಗಳನ್ನು ಟೈಪ್ ಮತ್ತು ಜೆರಾಕ್ಸ್ ಮಾಡಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಕರ ಪತ್ರಗಳ ಮೇಲೆ ಆರೋಪಿತನೇ ಮುದ್ರಣ ಮಾಡಿಸಿರುವ ಬಗ್ಗೆ ಯಾವುದೇ ಗುರುತು ಇರುವುದಿಲ್ಲ ಎಂದರೆ ಸರಿ.

ದಿಃ 03.12.2019 ರಂದು ನಾನು ಮನೆಯಲ್ಲಿಯೇ ಇದ್ದೆನು. ಆ ಸಮಯದಲ್ಲಿ ಪೊಲೀಸರು ನಮ್ಮ ಮನೆಗೆ ಬಂದಿದ್ದರು. ಆಗ

Visit **ecourts.gov.in** for updates or download mobile app "**eCourts Services**" from Android or iOS

**ನಾನು ಸ್ಥಳದಲ್ಲಿ ಇದ್ದೆನು. ಸದರಿ ಸಮಯದಲ್ಲಿ ಪೋಲೀಸರು ನನ್ನ ಸಹಿ ಪಡೆದಿರುವುದಿಲ್ಲ. "**

20. ಈ ಮೇಲ್ಕಂಡ ಒಪ್ಪಿತಾಂಶಗಳನ್ನು ಪರಿಶೀಲಿಸಲಾಗಿ ಚಾಸಾ-1 ರವರು ತನಗೆ ದೊಡ್ಡಮ್ಮನ ಮಗಳು ಎಂಬುದಾಗಿ, 2019 ನೇ ಸಾಲಿನಲ್ಲಿ ಚಾಸಾ-1 ರವರು ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲವೆಂದು, ಹಾಗೂ ಚಾಸಾ.1 ಮತ್ತು ಆರೋಪಿಯ ನಡುವೆ ಭಿನ್ನಾಬಿಪ್ರಾಯ ಇದ್ದ ಬಗ್ಗೆ ತನಗೆ ಗೊತ್ತಿಲ್ಲವೆಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ, ದಿನಾಂಕ 01.12.2019 ರಂದು ತಾನು ತೋಟದಲ್ಲಿದ್ದೆನು ಎಂಬುದಾಗಿ ನುಡಿದಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ 2019 ರಲ್ಲಿ ಆರೋಪಿ ಹಾಕಿದ್ದ ಕರಪತ್ರಗಳನ್ನು ತಾನು ಖುದ್ದು ನೋಡಿರುತ್ತೇನೆಂಬುದಾಗಿ ನುಡಿದಿದ್ದು, ಆ ದಿನ ಹಾಕಿದ್ದ ಬಟ್ಟೆಯ ಬಣ್ಣ ತನಗೆ ಗೊತ್ತಿಲ್ಲವೆಂದು, ಹಾಗೂ ಸದರಿ ದಿನದಂದು ದ್ವಿಚಕ್ರ ವಾಹನ ಸಂಖ್ಯೆ ಕೆ.ಎ 18 4603 ಆಗಿರುತ್ತದೆ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ಆ ಸಮಯದಲ್ಲಿ ತಾನೊಬ್ಬನೇ ಸ್ಥಳದಲ್ಲಿ ಇದಿದ್ದಾಗಿ , ತಮ್ಮ ಮನೆಗೂ ಹಾಗೂ ತೋಟಕ್ಕೂ 10 ಅಡಿ ಅಂತರವಿತ್ತುವೆಂಬುದಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಆರೋಪಿ ತನಗೆ ಸಂಬಂಧಿಕರಾಗಿರುವುದಿಲ್ಲ ಎಂಬುದಾಗಿ ನುಡಿದಿದ್ದು, ಆರೋಪಿ 2019 ರಲ್ಲಿ ಬಾಳೆಹೊನ್ನೂರು ಠಾಣೆಯಲ್ಲಿ ತನ್ನ ವಿರುದ್ಧ ದೂರು ನೀಡಿರುವ ಬಗ್ಗೆ ತನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದು, ಸದರಿ ಅಂಶವನ್ನು ಸಾಕ್ಷಿಯು ಅಲ್ಲಗಳೆಯದೇ ಇರುವುದು ಸಹ ಕೃತ್ಯಕ್ಕೆ ಸಂಬಂಧಿಸಿದಂತೆ ಸಂಶಯವ್ಯಕ್ತವಾಗುತ್ತದೆ. ಅಲ್ಲದೇ ಬಾಳೆಹೊನ್ನೂರು ಠಾಣೆಯಲ್ಲಿ ತನ್ನನ್ನು ಕರೆದು ವಿಚಾರ ಮಾಡಿದ್ದರು ಎಂದು

Visit **ecourts.gov.in** for updates or download mobile app "**eCourts Services**" from Android or iOS

ಸ್ಪಷ್ಟವಾಗಿ ನುಡಿದಿದ್ದು, ದೂರು ದಾಖಲಿಸದೇ ಇದ್ದ ಪಕ್ಷದಲ್ಲಿ ಯಾವ ಕಾರಣದಿಂದ ಸದರಿ ಸಾಕ್ಷಿಯನ್ನು ವಿಚಾರಣೆ ಮಾಡಲಾಗಿತ್ತು ಎಂಬುದರ ಬಗ್ಗೆ ಸದರಿ ಸಾಕ್ಷಿಯ ಹೇಳಿಕೆಯಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಸದರಿ ಅಂಶವನ್ನು ಪರಿಶೀಲಿಸಿದಾಗ ಚಾಸಾ.6 ರವರ ವಿರುದ್ದ ದೂರು ನೀಡಿರುವುದು ಹಾಗೂ ಚಾಸಾ.9 ರವರು ಚಾಸಾ.1 ರವರು ತನಗೆ ದೊಡ್ಡಮ್ಮನ ಮಗಳು ಆಗಿರುವುದರಿಂದ ಪ್ರಕರಣದಲ್ಲಿ ಹಿತಾಸಕ್ತಿವುಳ್ಳ ಸಾಕ್ಷಿದಾರರಾಗಿ ಕಂಡು ಬರುತ್ತದೆ. ಅಲ್ಲದೇ ಬಹುಮುಖ್ಯವಾಗಿ ಕೃತ್ಯವನ್ನು ಕಣ್ಣಾರೆ ಕಂಡ ಬಗ್ಗೆ ಘಟನಾ ಕಾಲದಲ್ಲಿ ತಾನು ತೋಟದಲ್ಲಿ ಇದ್ದೇನು ಎಂಬುದಾಗಿ ನುಡಿದಿದ್ದು, ತೋಟಕ್ಕೂ ಹಾಗೂ ಗಡಿಗೇಶ್ವರಕ್ಕೆ ಸುಮಾರು 2 ಕೀ.ಮೀ. ಹಂತರವಿರುತ್ತದೆ ಎಂಬುದಾಗಿ ನುಡಿದಿದ್ದು, ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ಕಡೆ ನಿಂತರೆ 2.ಕೀ.ಮೀ. ದೂರದಲ್ಲಿ ನಡೆಯುವ ಘಟನೆ ಗೊತ್ತಾಗುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಹೀಗಿರುವಲ್ಲಿ ಯಾವ ರೀತಿಯಲ್ಲಿ ಘಟನೆಯನ್ನು ಸದರಿ ಸಾಕ್ಷಿಯು ಕಣ್ಣಾರೆ ಕಂಡಿದ್ದರು ಎಂಬ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ.

21. ಅಲ್ಲದೇ ಸದರಿ ಸಾಕ್ಷಿಯು ತಾನು ತೋಟದಲ್ಲಿ ಇದ್ದರಿಂದ ಗಡಿಗೇಶ್ವರದಲ್ಲಿ ಏನು ನಡೆಯಿತು ಎಂದು ಗೊತ್ತಾಗಿರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿದ್ದು, ಕರಪತ್ರಗಳನ್ನು ತನ್ನ ತಾಯಿ ತನಗೆ ತಂದು ಕೊಟ್ಟರು, ಸದರಿ ಕರಪತ್ರ ಜೆರಾಕ್ಸ್ ಮಾಡಿದ ಕರ ಪತ್ರವಾಗಿತ್ತು ಎಂಬುದಾಗಿ ನುಡಿದಿದ್ದು, ಆರೋಪಿಯೇ ಸದರಿ ಕರಪತ್ರಗಳನ್ನು ಮುದ್ರಣ ಮಾಡಿಸಿರುವ ಬಗ್ಗೆ ಯಾವುದೇ ಗುರುತು ಇರುವುದಿಲ್ಲ ಎಂಬುದಾಗಿ ಸಹ ಸ್ಪಷ್ಟವಾಗಿ ಒಪ್ಪಿರುವುದರಿಂದ ಮುದ್ದೆ

ಮಾಲುಗಳ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ ಹಾಗೂ ಪ್ರಕರಣವನ್ನು ಕಣ್ಣಾರೆ ಕಂಡ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಈ ಮೇಲ್ಕಂಡ ಪಾಟೀ ಸವಾಲಿನ ಅಂಶಗಳನ್ನು ಒಟ್ಟಾರೆಯಾಗಿ ಪರಿಶೀಲಿಸಲಾಗಿ ಸದರಿ ಸಾಕ್ಷಿಯು ಪ್ರಕರಣದಲ್ಲಿ ಹಿತಾಸಕ್ತಿಯುಕ್ತ ಸಾಕ್ಷಿದಾರರು ಎಂಬುದಾಗಿ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ ಹಾಗೂ ಅಭಿಯೋಜನೆಗೆ ಸಮಕರ್ಪಕವಾಗಿ ಯಾವುದೇ ಉತ್ತರವು ಸದರಿ ಸಾಕ್ಷಿಯಿಂದ ಹೊರಬಂದಿರುವುದಿಲ್ಲ. ಆದ್ದರಿಂದ ಆರೋಪಿತನ ಮೇಲಿನ ಆರೋಪದ ಮೇಲೆ ಸಂಶಯ ವ್ಯಕ್ತವಾಗುತ್ತದೆ.

22. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ-7/ಪ್ರಾಸಾ-7 ಮಹೇಶ್ ಹೆಚ್.ಎಸ್., ಚಾಸಾ.6/ಪ್ರಾಸಾ-8 ಮಹಮದ್ ಹುಸೇನ್ ಮತ್ತು ಚಾಸಾ.5/ಪ್ರಾಸಾ.11 ರವರು ಅಮಾನತ್ ಮಹಜರ್ ಸಾಕ್ಷಿದಾರರಾಗಿದ್ದು, ಚಾಸಾ-7/ಪ್ರಾಸಾ-7 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾಹನ ಬಿಡುಗಡೆ ಮಹಜರನ್ನು ನಿಪಿ.10 ಎಂದು, ತನ್ನ ಸಹಿಯನ್ನು ನಿಪಿ.10(ಎ) ಎಂದು, ಪಂಚರ ನೋಟಿಸ್ ಅನ್ನು ನಿಪಿ.11 ಎಂದು, ತನ್ನ ಸಹಿಯನ್ನು ನಿಪಿ.11(ಎ) ಎಂದು, ಒಟ್ಟು 4 ಫೋಟೋಗಳನ್ನು ನಿಪಿ.12 ರಿಂದ ನಿಪಿ.15 ಎಂದು ಗುರುತಿಸಿಕೊಂಡು, ನಿಪಿ.10 ಕ್ಕೆ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆಂತಲೂ, ನಿಪಿ.12 ರಿಂದ ನಿಪಿ.15 ಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿರುತ್ತದೆ ಎಂದು ತನಗೆ ಗೊತ್ತಿಲ್ಲವೆಂದು, ಪೋಲಿಸರ ಕೋರಿಕೆ ಮೇರೆಗೆ ಅವುಗಳಲ್ಲಿ ನಿಂತಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ

ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರತಂದಿರುವುದಿಲ್ಲ.

23. ಚಾಸಾ.6/ಪ್ರಾಸಾ.8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿರುವುದಿಲ್ಲ, ತಾನು ಕಾಲೇಜ್ ಮುಗಿಸಿಕೊಂಡು ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಪೋಲಿಸರು ಬಂದು ಒಂದು ದಾಖಲೆಗೆ ಸಹಿ ಮಾಡಿಸಿಕೊಂಡಿದ್ದು, ಪೋಲಿಸರ ಕೋರಿಗೆ ಮೇರೆಗೆ ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.10 ರಲ್ಲಿರುವ ತನ್ನ ಸಹಿಯನ್ನು ನಿಪಿ.10 ಬಿ ಎಂದು, ನಿಪಿ.11 ರಲ್ಲಿರುವ ತನ್ನ ಸಹಿಯನ್ನುನಿಪಿ.11 ಬಿ ಎಂದು ಹಾಗೂ ನಿಪಿ.12 ರಿಂದ ನಿಪಿ.15 ಗಳನ್ನು ನೋಡಿ ಗುರುತಿಸಿ, ನಿಪಿ.12 ರಿಂದ 15 ಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿರುತ್ತದೆ ಎಂದು ತನಗೆ ಗೊತ್ತಿಲ್ಲವೆಂತಲೂ, ಪೋಲಿಸರ ಕೋರಿಕೆ ಮೇರೆಗೆ ಸದರಿ ಪೋಟೋಗಳಲ್ಲಿ ನಿಂತಿರುತ್ತೇನೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಚಾಸಾ.5/ಪ್ರಾಸಾ.11 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾಹನ ಬಿಡುಗಡೆ ಮಹಜರನ್ನು ನಿಪಿ.10 ಎಂದು, ತನ್ನ ಸಹಿಯನ್ನು ನಿಪಿ.10(ಎ) ಎಂದು, ಪಂಚರ ನೋಟಿಸ್ ಅನ್ನು ನಿಪಿ.11 ಎಂದು, ತನ್ನ ಸಹಿಯನ್ನು ನಿಪಿ.11 ಎ ಎಂದೂ , ಒಟ್ಟು 4 ಪೋಟೋಗಳನ್ನು ನಿಪಿ.12 ರಿಂದ ನಿಪಿ.15 ಎಂದೂ ಗುರುತಿಸಿ, ನಿಪಿ.10 ಕ್ಕೆ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆಂತಲೂ, ನಿಪಿ.12 ರಿಂದ 15 ಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಗಿರುತ್ತದೆ ಎಂದು ತನಗೆ ಗೊತ್ತಿಲ್ಲವೆಂತಲೂ, ಪೋಲಿಸರ ಕೋರಿಕೆ ಮೇರೆಗೆ ಅವುಗಳಲ್ಲಿ ನಿಂತಿರುತ್ತೇನೆಂದು ಸಾಕ್ಷ್ಯವನ್ನು

Visit **ecourts.gov.in** for updates or download mobile app "**eCourts Services**" from Android or iOS

ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಪ್ರತಿಕೂಲ ಸಾಕ್ಷಿದಾರೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಯಾವುದೇ ಉಪಯುಕ್ತವಾದ ಮಾಹಿತಿಯನ್ನು ಸದರಿ ಸಾಕ್ಷಿದಾರರು ಪ್ರಕರಣಕ್ಕೆ ಸಂಬಂಧಿಸಿದಂತೆ ಹೊರತಂದಿರುವುದಿಲ್ಲ.

24. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ.8/ಪ್ರಾಸಾ.9 ಜಯಂತಿ ರವರು ಪ್ರತ್ಯಕ್ಷ ಸಾಕಿದಾರರೆಂದು ವಿಚಾರಣೆಗೆ ಒಳಪಡಿಸಿದ್ದು, ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ.1 ತನ್ನ ಅಕ್ಕನ ಮಗಳು, ಚಾಸಾ 2 ತನ್ನ ಮಾವನಾಗಬೇಕು, ಚಾಸಾ 3 ತನ್ನ ಅಣ್ಣ, ಚಾಸಾ 9 ತನ್ನ ಮಗ, ಚಾಸಾ 11 ತನ್ನ ಅಕ್ಕ, ಚಾಸಾ 12 ತನ್ನ ತಂಗಿ ಎಂದು, ಉಳಿದ ಸಾಕ್ಷಿಗಳು ತನಗೆ ಗೊತ್ತಿರುವುದಿಲ್ಲವೆಂದು, ನ್ಯಾಯಾಲಯದ ಮುಂದಿರುವ ಆರೋಪಿ ತನಗೆ ಗೊತ್ತು ಎಂದು, ತಮ್ಮ ಮನೆಯ ಗೇಟ್ ಹತ್ತಿರ ಚಾಸಾ 1 ರವರ ಹೆಸರಿನಲ್ಲಿ ಒಂದು ಚೀಟಿಯನ್ನು ಕವರಿನಲ್ಲಿ ಇಟ್ಟಿದ್ದರು ಎಂದು, ತನಗೆ ಓದಲು ಬರದೇ ಇರುವುದರಿಂದ ತನ್ನ ಮಗನ ಹತ್ತಿರ ನೀಡಿದೆನು ಎಂದು, ಆಗ ಚಾಸಾ 1 ರವರು ಫೋನ್ ಮಾಡಿ ಜಯಪುರ ಪೋಲಿಸರಿಗೆ ವಿಚಾರ ತಿಳಿಸಿದರು ಎಂದು, ನಂತರ ಜಯಪುರ ಠಾಣೆಯಲ್ಲಿ ತಾನು ಹೇಳಿಕೆ ನೀಡಿರುತ್ತೇನೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿಯು ನಿಪಿ.3 ರಲ್ಲಿ ತನ್ನ ಸಹಿಯನ್ನು ನಿಪಿ.3(ಸಿ) ಎಂದು ಗುರುತಿಸಿರುತ್ತಾರೆ. ನಿಪಿ.4 ರಿಂದ ನಿಪಿ.7 ರ ಭಾವಚಿತ್ರಗಳಲ್ಲಿ ಸಾಕ್ಷಿಯು ತನ್ನನ್ನು ನೋಡಿ ಹಾಗೂ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು 1 ರಿಂದ 3 ಅನ್ನು ನೋಡಿ ಗುರುತಿಸಿಸಾಕ್ಷ್ಯವನ್ನು

ನುಡಿದಿರುತ್ತಾರೆ. ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜನೆಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿ ಜಯಪುರ ಪೋಲಿಸರು ಮಹಜರ್ ತಯಾರಿಸಲು ದಿನಾಂಕಃ 03/12/2019 ರಂದು ಹಾಜರಿದ್ದರು ಎಂಬುದಾಗಿ, ಆ ಸಮಯದಲ್ಲಿ ಮಹಜರ್ ಸಾಕ್ಷಿಗಳಾದ ಚಾಸಾ 2 ಮತ್ತು 3 ರವರ ಸಮಕ್ಷಮ ಇದ್ದು ಅವರ ಸಮಕ್ಷಮದಲ್ಲಿ ನಿಪಿ.3 ರ ಮಹಜರ್ ಜರುಗಿಸಲಾಯಿತು ಎಂಬುದಾಗಿ, ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆಯಲಾಯಿತು ಎಂಬುದಾಗಿ, ದಿನಾಂಕ 03/12/2019 ರಂದು ತಾನು ತಮ್ಮ ಮನೆಯ ಗೇಟಿನ ಬಳಿ ನಿಂತಿದ್ದೆ ಎಂಬುದಾಗಿ, ಆ ದಿನ ಸಂಜೆ ಕೆಎ-18/ಯು-4603 ರ ಬೈಕ್ ನಲ್ಲಿ ತನಗೆ ಪರಿಚಯ ಇರುವ ಅಡಿಗೆಬೈಲು ವಾಸಿಯಾದ ಸುಂದರೇಶ ಅವರು ಬಂದು ಚಾಸಾ 1 ರವರು ಇರುವ ಕರಪತ್ರಗಳನ್ನು ಗೇಟಿನ ಬಳಿ ಹಾಕಿದ್ದರು ಎಂಬುದಾಗಿ, ನಂತರ ಸದರಿ ಕರಪತ್ರಗಳನ್ನು ಚಾಸಾ.9 ರವರಿಗೆ ತಾನು ತೋರಿಸಿದಾಗ ಒಟ್ಟು 3 ಕರಪತ್ರಗಳು ಇದ್ದು, ಅವುಗಳ ಮೇಲ್ ಭಾಗದಲ್ಲಿ 9448528804, 7899469271, 8762630513, 9448094914 ಎಂದು ಮೊಬೈಲ್ ನಂಬರುಗಳನ್ನು ಬರೆದಿದ್ದರು ಹಾಗೂ ಸದರಿ ಕರಪತ್ರಗಳಲ್ಲಿ ಚಾಸಾ 1 ರವರ ಪೋಟೊಗಳು ಇದ್ದು ಇವಳು ತನ್ನ ಗಂಡನನ್ನು ಬಿಟ್ಟು ಬಂದು ಇದ್ದಾಳೆ ಎಂದು ಅಶ್ಲೀಲವಾಗಿ ಕಂಪ್ಯೂಟರ್ ನಲ್ಲಿ ತಯಾರು ಮಾಡಿರುವ ಅಕ್ಷರಗಳು ಇರುವುದಾಗಿ ಚಾಸಾ 9 ರವರು ಹೇಳಿರುತ್ತಾರೆ ಎಂಬುದಾಗಿ ನುಡಿಸಿಕೊಂಡಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

25. ಚಾಸಾ.8/ಪ್ರಾಸಾ.9 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಪಾಟೀ ಸವಾಲಿನಲ್ಲಿಃ

> **" ಚಾಸಾ.1 ರವರು ನನಗೆ ಹತ್ತಿರದ ಸಂಬಂಧಿ ಎಂದರೆ ಸರಿ. ಚಾಸಾ.1 ರವರ ಮೇಲೆ ಸಿಸಿ 34/2021 ರಲ್ಲಿ ದೂರು ದಾಖಲಾಗಿರುತ್ತದೆ ಎಂದರೆ ಸರಿ.**
>
> **ಆರೋಪಿ ಹಾಗೂ ಚಾಸಾ 1 ರವರ ನಡುವೆ ಮನಃಸ್ತಾಪ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಜರ ಕಾಲಕ್ಕೆ ಹಾಜರಾಗುವಂತೆ ಪೋಲಿಸರು ನನಗೆ ನೋಟಿಸ್ ಅನ್ನು ಜಾರಿ ಮಾಡಿರುವುದಿಲ್ಲ. ನಿಪಿ.3 ರ ಮಹಜರಿನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.**
>
> **ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ಸುಂದರೇಶನು ಸದರಿ ಕರಪತ್ರಗಳನ್ನು ಹಾಕಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ ಎಂದರೆ ಸರಿ.**
>
> **ನ್ಯಾಯಾಲಯದ ಮುಂದಿರುವ 1 ರಿಂದ 3 ರ ಮುದ್ದೆ ಮಾಲುಗಳನ್ನು ನಾನು ಪೋಲಿಸರ ಮುಂದೆ ಹಾಜರುಪಡಿಸಿರುತ್ತೇನೆ.**
>
> **ಮುದ್ದೆ ಮಾಲು 1 ರಿಂದ 3 ರಲ್ಲಿರುವ ಸಂಗತಿಗಳನ್ನು ಆರೋಪಿ ಸುಂದರೇಶ್ ಅವರು ಬರೆದು ಹಾಕಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. "**

26. ಈ ಮೇಲ್ಕಂಡ ಒಪ್ಪಿತಾಂಶಗಳನ್ನು ಪರಿಶೀಲಿಸಲಾಗಿ, ಚಾಸಾ.1 ರವರು ತನಗೆ ಹತ್ತಿರದ ಸಂಬಂಧಿ ಎಂಬುದಾಗಿ ಸ್ಪಷ್ಟವಾಗಿ ಒಪ್ಪಿರುತ್ತಾರೆ. ಅಲ್ಲದೇ

ಚಾಸಾ.1 ರವರ ಮೇಲೆ ಸಿ.ಸಿ. 34/2021 ರಲ್ಲಿ ದೂರು ದಾಖಲಾಗಿರುತ್ತದೆ ಎಂಬ ಅಂಶವನ್ನು ಸದರಿ ಸಾಕ್ಷಿಯು ಅಲ್ಲಗಳೆದಿರುವುದಿಲ್ಲ. ಆರೋಪಿ ಹಾಗೂ ಚಾಸಾ.1 ರವರ ನಡುವೆ ಮನಃಸ್ತಾಪ ಇರುವ ಬಗ್ಗೆ ತನಗೆ ಗೊತ್ತಿಲ್ಲವೆಂಬುದಾಗಿ, ಮಹಜರ್ ಕಾಲಕ್ಕೆ ಹಾಜರಾಗುವಂತೆ ಪೋಲಿಸರು ತನಗೆ ನೋಟಿಸ್ ಅನ್ನು ಜಾರಿ ಮಾಡಿರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ.3 ರ ಮಹಜರಿನಲ್ಲಿ ಬರೆದಿರುವ ಅಂಶಗಳು ತನಗೆ ಗೊತ್ತಿರುವುದಿಲ್ಲ ಎಂಬುದಾಗಿಯೂ, ತಾನು ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತನು ಸದರಿ ಕರಪತ್ರಗಳನ್ನು ಹಾಕಿರುವುದನ್ನು ತಾನು ಖುದ್ದಾಗಿ ನೋಡಿರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ನ್ಯಾಯಾಲಯದ ಮುಂದಿರುವ 1 ರಿಂದ 3 ರ ಮುದ್ದೆ ಮಾಲುಗಳನ್ನು ತಾನು ಪೋಲಿಸರ ಮುಂದೆ ಹಾಜರುಪಡಿಸಿರುತ್ತೇನೆ ಎಂಬುದಾಗಿ, ಮುದ್ದೆ ಮಾಲು 1 ರಿಂದ 3 ರಲ್ಲಿರುವ ಸಂಗತಿಗಳನ್ನು ಆರೋಪಿಯು ಬರೆದು ಹಾಕಿರುವುದನ್ನು ತಾನು ಖುದ್ದಾಗಿ ನೋಡಿರುವುದಿಲ್ಲವೆಂಬುದಾಗಿ ನುಡಿದಿರುತ್ತಾರೆ. ಸದರಿ ಮೇಲ್ಕಂಡ ಎಲ್ಲಾ ಪಾಟೀ ಸವಾಲಿನ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ಸಾಕ್ಷಿಯು ಪ್ರಕರಣದಲ್ಲಿ ಹಿತಾಸಕ್ತಿಯುಕ್ತ ಸಾಕ್ಷಿದಾರರು ಎಂಬುದಾಗಿ ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಅಭಿಯೋಜನೆಗೆ ಸಮಕರ್ಪಕವಾಗಿ ಯಾವುದೇ ಉತ್ತರವು ಸದರಿ ಸಾಕ್ಷಿಯಿಂದ ಹೊರಬಂದಿರುವುದಿಲ್ಲ. ಆದ್ದರಿಂದ ಆರೋಪಿತನ ಮೇಲಿನ ಆರೋಪದ ಮೇಲೆ ಸಂಶಯ ವ್ಯಕ್ತವಾಗುತ್ತದೆ.

27. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ನುಡಿಸಿದ್ದು, ಅದರಲ್ಲಿ ಚಾಸಾ.21/ಪ್ರಾಸಾ.10 ರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಬಗ್ಗೆ ಹಾಗೂ ತನಿಖೆಯನ್ನು ಕೈಗೊಂಡು ಆರೋಪಿ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ಬಗ್ಗೆ ಸಾಕಿದಾರರಾಗಿದ್ದು, ಸದರಿ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ03/02/2021 ರಂದು ತಾನು ಹಗಲು ಎಸ್.ಹೆಚ್.ಓ. ಕರ್ತ್ಯವದಲ್ಲಿದ್ದಾಗ ದಿನಾಂಕಃ02/12/2019 ರಂದು ಚಾಸಾ.1 ರವರು ಠಾಣೆಗೆ 8-30 ಗಂಟೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಮೊಕದ್ದಮೆ ಸಂಖ್ಯೆ 31/2019 ರಲ್ಲಿ ಕಲಂ 501, 509, 354(ಸಿ) ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆಂತಲೂ, ದಿನಾಂಕಃ03/12/2019 ರಂದು ಪ್ರಕರಣದ ಆರೋಪಿಯ ಪತ್ತೆಕಾರ್ಯಕ್ಕಾಗಿ ಚಾಸಾ.17 ಹಾಗೂ ಚಾಸಾ.18 ರವರನ್ನು ನೇಮಕ ಮಾಡಿರುತ್ತೇನೆಂತಲೂ, ನಂತರ ಠಾಣಾ ಸಿಬ್ಬಂದಿಗಳೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳದಲ್ಲಿ ಹಾಜರಿದ್ದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ 8 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಮಹಜರ್ ಕ್ರಮವನ್ನು ಚಾಸಾ 2 ಮತ್ತು ಚಾಸಾ 3 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12 ಗಂಟೆವರೆಗೆ ಜರುಗಿಸಿ, ಫೋಟೊ ತೆಗೆಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, 3 ಕರಪತ್ರಗಳನ್ನು ವಶಕ್ಕೆ ಪಡೆದು, ಬಿಳಿ ಬಟ್ಟೆಯಲ್ಲಿ ಹಾಕಿ **ಪಿ** ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆಂತಲೂ, ನಂತರ ವಾಪಾಸ್ಸಾಗಿ ಕರಪತ್ರಗಳನ್ನು ಮಾಲುಪಟ್ಟಿ ಸಂಖ್ಯೆ 35/2019 ರಲ್ಲಿ ದಾಖಲಿಸಿರುತ್ತೇನೆಂತಲೂ, ನಂತರ ಅದೇ ದಿನ ಮದ್ಯಾಹ್ನ 12-45 ಕ್ಕೆ ಪ್ರಕರಣದ

ಆರೋಪಿ ಸುಂದರೇಶನನ್ನು ಚಾಸಾ 17 ಹಾಗೂ ಚಾಸಾ.18 ರವರು ಹಾಜರುಪಡಿಸಿದ ಮೇರೆಗೆ ಆರೋಪಿತನ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆಂತಲೂ, ನಂತರ ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ನಂತರ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆಂತಲೂ, ಅದೇ ದಿನ ಸಾಕ್ಷಿದಾರರಾದ ಚಾಸಾ 8 ರವರ ಹೇಳಿಕೆ ಪಡೆದಿರುತ್ತೇನೆಂತಲೂ, ದಿಃ04/12/2019 ರಂದು ಪ್ರಕರಣದಲ್ಲಿ ಚಾಸಾ.1 ರವರ ಹೇಳಿಕೆ ದಂ. ಪ್ರ. ಸಂ. ಕಲಂ 164 ರ ರೀತ್ಯಾ ಪಡೆಯಲು ಮಹಿಳಾ ಸಿಬ್ಬಂದಿಯ ಮೂಲಕ ಶೃಂಗೇರಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆಂತಲೂ, ನಂತರ ಚಾಸಾ 1 ರವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆಂತಲೂ, ದಿನಾಂಕಃ06/12/2019 ರಂದು ಪ್ರಕರಣದಲ್ಲಿ ಆರೋಪಿತನು ಕೃತ್ಯಕ್ಕೆ ಬಳಸಿದ ಬೈಕನ್ನು ಪತ್ತೆ ಮಾಡಲು ಚಾಸಾ.19 ರವರನ್ನು ನೇಮಕ ಮಾಡಿರುತ್ತೇನೆಂತಲೂ, ಸದರಿಯವರು ಕೆಎ-18 ಯು 4603 ಬೈಕನ್ನು ತನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಬೈಕನ್ನು ಠಾಣಾ ಮುಂಭಾಗದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದಿರುತ್ತೇನೆಂತಲೂ, ಸದರಿ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆಂತಲೂ, ವಶಕ್ಕೆ ಪಡೆದ ಬೈಕ್ ಅನ್ನು ಮಾಲುಪಟ್ಟಿ ಸಂಖ್ಯೆ 36/2019 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂತಲೂ, ಅದೇ ದಿನ ಚಾಸಾ 13 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಮನವಿ ನೀಡಿರುತ್ತೇನೆಂತಲೂ, ದಿಃ07/12/2019 ರಂದು ಚಾಸಾ.9 ಹಾಗೂ ಚಾಸಾ.10 ರವರ ಹೇಳಿಕೆ ಪಡೆದಿರುತ್ತೇನೆಂತಲೂ, ದಿಃ14/12/2019 ರಂದು ನ್ಯಾಯಾಲಯದ ಆದೇಶದ ಮೇರೆಗೆ ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲ್ ಅನ್ನು ಚಾಸಾ 6 ಮತ್ತು 7 ರವರ

ಸಮಕ್ಷಮ 11 ರಿಂದ 11-30 ರವರೆಗೂ ಮಹಜರ್ ಕ್ರಮ ಜರುಗಿಸಿ ವಾಹನ ಬಿಡುಗಡೆ ಮಾಡಿರುತ್ತೇನೆಂತಲೂ, ಸದರಿ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆಂತಲೂ, ಹಾಗೂ ವಾಹನದ ಆರ್ ಸಿ ಮಾಲೀಕರ ಹೇಳಿಕೆ ಪಡೆದಿರುತ್ತೇನೆಂತಲೂ, ದಿನಾಂಕಃ 20/12/2019 ರಂದು ಕೃತ್ಯ ನಡೆದ ಸ್ಥಳದ ಬಗ್ಗೆ ಚಾಸಾ.13 ರವರು ನೀಡಿದ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆಂತಲೂ, ದಿನಾಂಕಃ22/12/2019 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ.11 ಮತ್ತು ಚಾಸಾ.12 ರವರ ಹೇಳಿಕೆ ಪಡೆದಿರುತ್ತೇನೆಂತಲೂ, ದಿನಾಂಕಃ10/03/2020 ರಂದು ಚಾಸಾ 1 ರವರ ದಂ. ಪ್ರ. ಸಂ. 164 ರ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದಿರುತ್ತೇನೆಂತಲೂ, ಅದೇ ದಿನ ಚಾಸಾ. 15 ರವರಿಂದ 65(ಬಿ) ರೀತ್ಯಾ ದೃಡೀಕರಣ ಪಡೆದಿರುತ್ತೇನೆಂತಲೂ, ನಂತರ ಪ್ರಕರಣದಲ್ಲಿ ತನಿಖೆ ಮುಕ್ತಾಯವಾಗಿದ್ದು ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ತನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆಂದು ನುಡಿದಿರುತ್ತಾರೆ.

28. ಸದರಿ ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿಯನ್ನು ನಿಪಿ.1(ಬಿ) ಎಂದು, ನಿಪಿ.2 ರಲ್ಲಿರುವ ತನ್ನ ಸಹಿಯನ್ನು ನಿಪಿ.2(ಬಿ) ಎಂದು, ನಿಪಿ.3 ರಲ್ಲಿರುವ ತನ್ನ ಸಹಿಯನ್ನು ನಿಪಿ.3(ಡಿ) ಎಂದು , ನಿಪಿ.4 ರಿಂದ 7 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.10 ರಲ್ಲಿರುವ ತನ್ನ ಸಹಿಯನ್ನು ನಿಪಿ.10(ಸಿ) ಎಂದು, ನಿಪಿ.11 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11 ಸಿ ಎಂದೂ ಗುರುತಿಸಲಾಯಿತು. ನಿಪಿ.12

Visit **ecourts.gov.in** for updates or download mobile app "**eCourts Services**" from Android or iOS

ರಿಂದ 15 ರ ಫೋಟೋಗಳನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ.16 ಎಂದು, ತನ್ನ ಸಹಿಯನ್ನು ನಿಪಿ.16 ಎ ಎಂದು ಕಲಂ133 ಐಎಂ ವಿ ನೋಟಿಸನ್ನು ಹಾಗೂ ಉತ್ತರವನ್ನು ನಿಪಿ.17 ಎಂದು, ತನ್ನ ಸಹಿಯನ್ನು ನಿಪಿ.17 ಎ ಎಂದು, ಕಲಂ 65 ಬಿ ದೃಡೀಕರಣವನ್ನು ನಿಪಿ.18 ಎಂದು, ತನ್ನ ಸಹಿಯನ್ನು ನಿಪಿ.18 ಎ ಎಂದು, ಪಿಡಿಒ ಅವರಿಗೆ ನೀಡಿದ ಮನವಿಯನ್ನು ನಿಪಿ.19 ಎಂದು, ತನ್ನ ಸಹಿಯನ್ನು ನಿಪಿ.19 ಎ ಎಂದು, ಪಿಡಿಒ ಅವರ ವರದಿಗಳನ್ನು ನಿಪಿ.20 ಹಾಗೂ 21 ಎಂದೂ , ತನ್ನ ಸಹಿಗಳನ್ನು ನಿಪಿ.20 ಎ ಹಾಗೂ ನಿಪಿ.21 ಎ ಎಂದು, ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನಿಪಿ.22, ತನ್ನ ಸಹಿಯನ್ನು ನಿಪಿ.22 ಎ ಎಂದು ಗುರುತಿಸಿರುತ್ತಾರೆ ಹಾಗೂ ಮುದ್ದೆ ಮಾಲು 1 ರಿಂದ 3 ಅನ್ನು ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

29. ಸದರಿ ಸಾಕ್ಷಿಯನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಪಾಟೀ ಸವಾಲಿನಲ್ಲಿಃ

> **"ನಿಪಿ.1 ರ ದೂರನ್ನು ನೀಡುವ ಕಾಲಕ್ಕೆ ಚಾಸಾ 1 ರವರು ಒಬ್ಬರೇ ಬಂದಿದ್ದರು. ದೂರನ್ನು ಚಾಸಾ 1 ರವರು ಟೈಪ್ ಮಾಡಿಸಿ ತಂದಿದ್ದು, ಆ ರೀತಿ ಎಲ್ಲಿ ಟೈಪ್ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.**
>
> **ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಬಗ್ಗೆ ನನಗೆ ಮೊದಲೇ ಮಾಹಿತಿ ಇರಲಿಲ್ಲ. ಸದರಿ ಸ್ಥಳದ ಮಾಹಿತಿ ಗುರುಮೂರ್ತಿ ಎಂಬ ಠಾಣಾ ಸಿಬ್ಬಂದಿಗೆ ತಿಳಿದಿತ್ತು.**

Visit **ecourts.gov.in** for updates or download mobile app "**eCourts Services**" from Android or iOS

ಮುದ್ದೆ ಮಾಲುಗಳನ್ನು ಯಾರು ತಂದು ಕೊಟ್ಟರು ಎಂದರೆ ಚಾಸಾ 8 ರವರು ನಿನ್ನೆ ದಿನ ಸಂಜೆ ಗೇಟ್ ಒಳಗೆ ತಂದು ಬಿಸಾಡಿ ಹೋಗಿದ್ದರು ಎಂದು ತಮ್ಮ ಮನೆಯಿಂದ ತಂದು ಹಾಜರುಪಡಿಸಿದರೆಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋದೆ ಎನ್ನಲಾದ ಸಮಯದಲ್ಲಿ ಯಾವುದೇ ಕರಪತ್ರಗಳು ಇರಲಿಲ್ಲ ಎಂದರೆ ಸರಿ. "

ಚಾಸಾ 8 ರವರಿಗೆ ಸಂಬಂಧಪಟ್ಟ ಮನೆಯ ಬಗ್ಗೆ ವಿಚಾರಣೆ ಮಾಡಲಾಗಿತ್ತೆ ಎಂದರೆ ವಿಚಾರಣೆ ಮಾಡಿರುವುದಿಲ್ಲ. ಸದರಿ ಮನೆಯಲ್ಲಿ ಆ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ.

ನಿಪಿ.3 ರ ಮಹಜರ್ ನಲ್ಲಿ ಕೆಲವು ದೂರವಾಣಿ ಸಂಖ್ಯೆಗಳು ನಮೂದಾಗಿದ್ದು ಸದರಿ ದೂರವಾಣಿ ಸಂಖ್ಯೆಗಳು ಯಾರದ್ದೆಂದು ನನ್ನ ತನಿಖಾ ಕಾಲದಲ್ಲಿ ಪರಿಶೀಲನೆ ಮಾಡಿರುವುದಿಲ್ಲ.

ಮುದ್ದೆ ಮಾಲು 1 ರಿಂದ 3 ನಿರ್ದಿಷ್ಟವಾಗಿ ಎಲ್ಲಿ ಬಿದ್ದಿದ್ದವು ಎಂದರೆ ಚಾಸಾ 8 ರವರು ಹೇಳಿದ ಆಧಾರದ ಮೇಲೆ ಗೇಟಿನ ಪಕ್ಕದಲ್ಲಿ ಬಿದ್ದಿದ್ದವು ಎನ್ನುತ್ತಾರೆ.

ನಿಪಿ.4 ಮತ್ತು 5 ರ ಫೋಟೋಗಳಲ್ಲಿ ಮುದ್ದೆ ಮಾಲು 1 ರಿಂದ 3 ಕಾಣುತ್ತಿಲ್ಲ ಎಂದರೆ ಸರಿ. ನಿಪಿ.4 ಮತ್ತು 5 ರಲ್ಲಿ ಯಾವುದೇ ಮುದ್ದೆ ಮಾಲು ಕಾಣುತ್ತಿಲ್ಲ ಎಂದರೆ ಸರಿ.

Visit **ecourts.gov.in** for updates or download mobile app "**eCourts Services**" from Android or iOS

**ಮುದ್ದೆ ಮಾಲು 1 ರಿಂದ 3 ರ ಮೇಲೆ ಪ್ರಕರಣಕ್ಕೆ ಸಂಬಂಧಿಸಿದ ಬಗ್ಗೆ ವಿಶೇಷ ಗುರುತಿಲ್ಲ ಎಂದರೆ ಸರಿ.**

**ಮುದ್ದೆ ಮಾಲು 1 ರಿಂದ 3 ರ ಮೇಲೆ ಟೈಪ್ ಮಾಡಿಸಲಾದ ಬರವಣಿಗೆಗಳನ್ನು ಎಲ್ಲಿ ಟೈಪ್ ಮಾಡಿಸಲಾಯಿತು ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ.**

**ಮುದ್ದೆ ಮಾಲು 1 ರಿಂದ 3 ರ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಲಾಗಿತ್ತು ಎನ್ನುತ್ತಾರೆ. "**

30. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ ನಿಪಿ.1 ರ ದೂರನ್ನು ನೀಡುವ ಕಾಲಕ್ಕೆ ಚಾಸಾ 1 ರವರು ಒಬ್ಬರೇ ಬಂದಿದ್ದರು ಎಂಬುದಾಗಿ, ದೂರನ್ನು ಚಾಸಾ 1 ರವರು ಟೈಪ್ ಮಾಡಿಸಿ ತಂದಿದ್ದು, ಆ ರೀತಿ ಎಲ್ಲಿ ಟೈಪ್ ಮಾಡಿಸಿರುತ್ತಾರೆ ಎಂದು ತನಗೆ ಗೊತ್ತಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ಜಯಪುರದಿಂದ ಆಡುವಳ್ಳಿ ಗ್ರಾಮ ಸುಮಾರು 30 ಕಿಮೀ ಅಂತರ ಇರುತ್ತದೆ ಎಂಬುದಾಗಿ, ಸದರಿ ಆಡುವಳ್ಳಿ ಎನ್ ಆರ್ ಪುರ ತಾಲೂಕಿನ ವ್ಯಾಪ್ತಿಗೆ ಒಳಪಡುತ್ತದೆ ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ದೂರಿನಲ್ಲಿ ಸ್ಕೂಟಿ ಎಂದು ನಮೂದಾಗಿದ್ದು ಸದರಿ ಸ್ಕೂಟಿ ಬಗ್ಗೆ ವಿಚಾರಣೆ ಮಾಡಲಾಗಿತ್ತೇ ಎಂದರೆ ಸ್ಕೂಟಿಯ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ ಎಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಬಗ್ಗೆ ತನಗೆ ಮೊದಲೇ ಮಾಹಿತಿ ಇರಲಿಲ್ಲ ಎಂಬುದಾಗಿ, ಸದರಿ ಸ್ಥಳದ ಮಾಹಿತಿ ಗುರುಮೂರ್ತಿ ಎಂಬ ಠಾಣಾ ಸಿಬ್ಬಂದಿಗೆ ತಿಳಿದಿತ್ತು ಎಂಬುದಾಗಿ

Visit **ecourts.gov.in** for updates or download mobile app "**eCourts Services**" from Android or iOS

ನುಡಿದಿರುತ್ತಾರೆ. ಮುದ್ದೆ ಮಾಲುಗಳನ್ನು ಯಾರು ತಂದು ಕೊಟ್ಟರು ಎಂದರೆ ಚಾಸಾ.8 ರವರು ನಿನ್ನೆ ದಿನ ಸಂಜೆ ಗೇಟ್ ಒಳಗೆ ತಂದು ಬಿಸಾಡಿ ಹೋಗಿದ್ದರು ಎಂದು ತಮ್ಮ ಮನೆಯಿಂದ ತಂದು ಹಾಜರುಪಡಿಸಿದರೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಅಲ್ಲದೇ ತಾನು ಸ್ಥಳಕ್ಕೆ ಹೋದೆ ಎನ್ನಲಾದ ಸಮಯದಲ್ಲಿ ಯಾವುದೇ ಕರಪತ್ರಗಳು ಇರಲಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಸದರಿ ಸಾಕ್ಷಿಯು ಚಾಸಾ.8 ರವರಿಗೆ ಸಂಬಂಧಪಟ್ಟ ಮನೆಯ ಬಗ್ಗೆ ವಿಚಾರಣೆ ಮಾಡಲಾಗಿತ್ತೇ ಎಂದರೆ ವಿಚಾರಣೆ ಮಾಡಿರುವುದಿಲ್ಲ ಎಂಬುದಾಗಿ, ಸದರಿ ಮನೆಯಲ್ಲಿ ಆ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲವೆಂಬುದಾಗಿ ನುಡಿದಿರುತ್ತಾರೆ. ನಿಪಿ.3 ರ ಮಹಜರ್ ನಲ್ಲಿ ಕೆಲವು ದೂರವಾಣಿ ಸಂಖ್ಯೆಗಳು ನಮೂದಾಗಿದ್ದು ಸದರಿ ದೂರವಾಣಿ ಸಂಖ್ಯೆಗಳು ಯಾರದ್ದೆಂದು ತನ್ನ ತನಿಖಾ ಕಾಲದಲ್ಲಿ ಪರಿಶೀಲನೆ ಮಾಡಿರುವುದಿಲ್ಲ ಎಂಬುದಾಗಿ ನುಡಿದಿರುತ್ತಾರೆ. ಮುದ್ದೆ ಮಾಲು 1 ರಿಂದ 3 ನಿರ್ದಿಷ್ಟವಾಗಿ ಎಲ್ಲಿ ಬಿದ್ದಿದ್ದವು ಎಂದರೆ ಚಾಸಾ 8 ರವರು ಹೇಳಿದ ಆಧಾರದ ಮೇಲೆ ಗೇಟಿನ ಪಕ್ಕದಲ್ಲಿ ಬಿದ್ದಿದ್ದವು ಎಂಬುದಾಗಿ ನುಡಿದಿರುತ್ತಾರೆ. ಅಲ್ಲದೇ ನಿಪಿ.4 ಮತ್ತು 5 ರ ಫೋಟೋಗಳಲ್ಲಿ ಮುುದ್ದೆ ಮಾಲು 1 ರಿಂದ 3 ಕಾಣುತ್ತಿಲ್ಲ ಎಂಬ ಅಂಶವನ್ನು ಅಲ್ಲಗಳೆಯದೇ ಇರುವುದು ಸಹ ಕೃ ಸಂ ಸಂ ವ್ಯ. ನಿಪಿ.4 ಮತ್ತು 5 ರಲ್ಲಿ ಯಾವುದೇ ಮುದ್ದೆ ಮಾಲು ಕಾಣುತ್ತಿಲ್ಲ ಎಂಬ ಅಂಶವನ್ನು ಸಹ ಅಲ್ಲಗಳೆದಿರುವುದಿಲ್ಲ. ಅಲ್ಲದೇ ಮುದ್ದೆ ಮಾಲು 1 ರಿಂದ 3 ರ ಮೇಲೆ ಪ್ರಕರಣಕ್ಕೆ ಸಂಬಂಧಿಸಿದ ಬಗ್ಗೆ ವಿಶೇಷ ಗುರುತಿಲ್ಲ ಎಂಬುದಾಗಿಯೂ, ಮುದ್ದೆ ಮಾಲು 1 ರಿಂದ 3 ರ ಮೇಲೆ ಟೈಪ್ ಮಾಡಿಸಲಾದ ಬರವಣಿಗೆಗಳನ್ನು ಎಲ್ಲಿ ಟೈಪ್ ಮಾಡಿಸಲಾಯಿತು ಎಂದು ತಾನು

Visit **ecourts.gov.in** for updates or download mobile app "**eCourts Services**" from Android or iOS

ಪರಿಶೀಲನೆ ಮಾಡಿರುವುದಿಲ್ಲ ಎಂಬುದಾಗಿ ಸ್ಪಷ್ಟವಾಗಿ ನುಡಿದಿರುತ್ತಾರೆ. ಮುದ್ದೆ ಮಾಲು 1 ರಿಂದ 3 ರ ಮೇಲೆ ತನ್ನ ಹಾಗೂ ಪಂಚರ ಸಹಿ ಇಲ್ಲ ಎಂಬುದನ್ನು ಅಲ್ಲಗಳೆದಿರುವುದಿಲ್ಲ. ಅಲ್ಲದೇ ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಲಾಗಿತ್ತು ಎಂದು ನುಡಿದಿರುತ್ತಾರೆ. ಸದರಿ ಮೇಲ್ಕಂಡ ಪಾಟೀ ಸವಾಲಿನ ಅಂಶಗಳನ್ನು ಒಟ್ಟಾರೆಯಾಗಿ ಪರಿಶೀಲಿಸಲಾಗಿ ನಿಪಿ.1, ನಿಪಿ.3, 4 ಮತ್ತು ಮುದ್ದೆ ಮಾಲು-1 ರಿಂದ 3 ರ ಬಗ್ಗೆ ಸಂಶಯವ್ಯಕ್ತವಾಗುತ್ತದೆ.

31. ಈ ಎಲ್ಲಾ ಸಾಕ್ಷಿದಾರರ ಹೇಳಿಕೆಗಳು ಹಾಗೂ ಪಾಟೀ ಸವಾಲಿನಲ್ಲಿನ ಒಪ್ಪಿತಾಂಶಗಳನ್ನು ಪರಿಶೀಲಿಸಲಾಗಿ ಚಾಸಾ-1 ಹಾಗೂ ಆರೋಪಿಯ ನಡುವೆ ಘಟನೆ ನಡೆದಿರುವ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ. ಅದಲ್ಲದೇ ಈ ಪ್ರಕರಣದಲ್ಲಿ ಸ್ಥಳ ಮಹಜರ್, ಅಮಾನತ್ ಮಹಜರ್ ಹಾಗೂ ಸಾಂಧರ್ಬಿಕ ಸಾಕ್ಷಿದಾರರಾದ ಚಾಸಾ.2, 3, 10, 7, 6 ಮತ್ತು 11 ರವರು ಕೃತ್ಯಕ್ಕೆ ಸಂಬಂಧಿಸಿದಂತೆ ಘಟನೆ ಘಟಿಸಿರುವ ಬಗ್ಗೆ ಯಾವುದೇ ಪೂರಕ ಅಂಶಗಳು ಹೊರತಂದಿರುವುದಿಲ್ಲ. ಚಾಸಾ.9 ರವರಿಗೆ ಚಾಸಾ.1 ರವರು ದೊಡ್ಡಮ್ಮನ ಮಗಳು, ಹಾಗೂ ಚಾಸಾ.1 ರವರು ಚಾಸಾ.8 ರವರಿಗೆ ಅಕ್ಕನ ಮಗಳು ಆಗಿದ್ದು, ಸಂಬಂಧಿಕರಾಗಿರುತ್ತಾರೆ ಹಾಗೂ ಸಹಜವಾಗಿ ಸಾಕ್ಷಿ ನುಡಿಯುವಂತಹ ಹಿತಾಸಕ್ತಿವುಳ್ಳವರಾಗಿರುತ್ತಾರೆ. ಚಾಸಾ.21 ರವರು ತನಿಖಾಧಿಕಾರಿ ಆಗಿರುತ್ತಾರೆ. ಅಲ್ಲದೆ ಚಾಸಾ.9 ಮತ್ತು ಚಾಸಾ.8 ರವರನ್ನು ಪಾಟೀ ಸವಾಲು ಮಾಡಿದಾಗ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಉಪಯುಕ್ತವಾದ ಮಾಹಿತಿ ಹೊರತಂದಿರುವುದಿಲ್ಲ. ಈ ಎಲ್ಲಾ ಅಂಶಗಳಿಂದ ಒಟ್ಟಾರೆಯಾಗಿ ಪರಿಶೀಲಿಸಲಾಗಿ ಆರೋಪಿಯು ಭಾ.ದಂ.ಸಂ.ಕಲಂ 501, 509 ಮತ್ತು 354(ಸಿ)ರ ಆರೋಪಗಳಿಗೆ

Visit **ecourts.gov.in** for updates or download mobile app "**eCourts Services**" from Android or iOS

ಸಂಬಂಧಿಸಿದಂತೆ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದುದರಿಂದ ಸಂಶಯದ ಲಾಭವನ್ನು ಆರೋಪಿಯು ಹೊಂದಬಹುದಾಗಿದೆ. ಒಟ್ಟಾರೆಯಾಗಿ ಅಭಿಯೋಜನೆಯು ಆರೋಪಿಯ ಮೇಲಿನ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿಗೆ **ಅಂಶ-1 ರಿಂದ ಅಂಶ-3 ಗಳನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

32. **ಅಂಶ 4ಃ-**

ಮೇಲೆ ಹೇಳಿದ ವಿವರಣೆಯಿಂದಾಗಿ ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಾಬೀತಪಡಿಸುವಲ್ಲಿ ವಿಫಲರಾಗಿರುವುದರಿಂದ ಈ ಕೆಳಕಂಡಂತೆಃ

## **ಆ ದೇ ಶ**

ದಂ. ಪ್ರ. ಸಂ. ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ದ ಮಾಡಲಾದ ಭಾ.ದಂ.ಸಂ.ಕಲಂ 501, 509 ಮತ್ತು 354(ಸಿ)ರ ಆರೋಪಗಳಿಂದ ಆರೋಪಿಯನ್ನು ಈ ಮೊಕದ್ದಮೆಯಿಂದ ನ್ಯಾಯಾಲಯವು ದೋಷಮುಕ್ತರನ್ನಾಗಿ ಖುಲಾಷೆಗೊಳಿಸಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯೆ ಸಂಹಿತೆ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ದಿನದಿಂದ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತವೆ.

ಎಂ.ಒ.1 ರಿಂದ 3, ಉಪಯೋಗಕ್ಕೆ ಬಾರದ ವಸ್ತುಗಳು ಆಗಿದ್ದರಿಂದ ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖಿಸಿ, ಅವರು ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 17 ನೇ ದಿವಸ ಜೂನ್ ಮಾಹೆ 2026 ರಂದು ನಾನು ಘೋಷಿಸಿದ್ದೇನೆ)

ಸಹಿ/-xxx17.07.2026.
**(ಶ್ರೀಮತಿ ನಂದಿನಿ ಎಂ.ಎನ್.)**
**ಸಿವಿಲ್‌ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂಃ ಕೊಪ್ಪ**

## ***ಅನುಬಂಧ***

***ಅಭಿಯೋಜನೆಯವರ ಪರವಾಗಿ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿಃ***

ಪ್ರಾಸಾ 1 ಃ ಸೌಮ್ಯ
ಪ್ರಾಸಾ 2 ಃ ಕೃಷ್ಣಪ್ಪ
ಪ್ರಾಸಾ 3 ಃ ಗಿರಿಯಪ್ಪ
ಪ್ರಾಸಾ 4 ಃ ಸುಧಾಕರ
ಪ್ರಾಸಾ 5 ಃ ಪ್ರಸನ್ನ ಕೆ.ವಿ.
ಪ್ರಾಸಾ 6 ಃ ಗೌತಮ್
ಪ್ರಾಸಾ 7 ಃ ಮಹೇಶ್ ಹೆಚ್ ಎಸ್
ಪ್ರಾಸಾ 8 ಃ ಮಹಮ್ಮದ್ ಹುಸೇನ್
ಪ್ರಾಸಾ 9 ಃ ಜಯಂತಿ
ಪ್ರಾಸಾ 10ಃ ಸತೀಶ್ ಕೆ.ಎಸ್.
ಪ್ರಾಸಾ 11ಃ ಮಹೇಶ್ ಗೌಡ

Visit **ecourts.gov.in** for updates or download mobile app "**eCourts Services**" from Android or iOS

***<u>ಆರೋಪಿ  ಪರವಾಗಿ ವಿಚಾರಣೆ ಯಾದ ಸಾಕ್ಷಿದಾರರ ಪಟ್ಟಿಃ</u>***

- ಇಲ್ಲ -

***<u>ಅಭಿಯೋಜನೆಯವರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ</u>***

| | | |
|---|---|---|
| ನಿಪಿ 1 | ಃ | ದೂರು |
| ನಿಪಿ 1(ಎ)-(ಬಿ) | ಃ | ಸಹಿಗಳು |
| ನಿಪಿ 2 | ಃ | ಅಮಾನತ್ ಮಹಜರ್ |
| ನಿಪಿ 2(ಎ)-(ಸಿ) | ಃ | ಸಹಿಗಳು |
| ನಿಪಿ 3 | ಃ | ಸ್ಥಳ ಮಹಜರ್ |
| ನಿಪಿ 3(ಎ)-(ಡಿ) | ಃ | ಸಹಿಗಳು |
| ನಿಪಿ 4-7 | ಃ | ಫೋಟೋಗಳು |
| ನಿಪಿ 8 | ಃ | ಸಿ.ಡಿ. |
| ನಿಪಿ 9 | ಃ | ಪ್ರಾಸಾ.5 ರವರ ಹೇಳಿಕೆ |
| ನಿಪಿ 10 | ಃ | ವಾಹನ ಬಿಡುಗಡೆ ಮಹಜರ್ |
| ನಿಪಿ 10(ಎ)-(ಸಿ) | ಃ | ಸಹಿಗಳು |
| ನಿಪಿ 11 | ಃ | ಪಂಚರಿಗೆ ನೀಡಿದ ನೋಟೀಸು |
| ನಿಪಿ 11(ಎ)-(ಸಿ) | ಃ | ಸಹಿಗಳು |
| ನಿಪಿ 12-15 | ಃ | ಫೋಟೋಗಳು |
| ನಿಪಿ 16 | ಃ | ಪ್ರಥಮ ವರ್ತಮಾನ ವರದಿ |
| ನಿಪಿ 16(ಎ) | ಃ | ಸಹಿ |
| ನಿಪಿ 17 | ಃ | ಐ ಎಂ ವಿ ನೋಟೀಸು ಹಾಗೂ ಉತ್ತರ |
| ನಿಪಿ 17(ಎ) | ಃ | ಸಹಿ |
| ನಿಪಿ 18 | ಃ | ದೃಡೀಕರಣ |
| ನಿಪಿ 18(ಎ) | ಃ | ಸಹಿ |
| ನಿಪಿ 19 | ಃ | ಪಿ.ಡಿ.ಒ. ರವರಿಗೆ ನೀಡಿದ ಮನವಿ |
| ನಿಪಿ 19(ಎ) | ಃ | ಸಹಿ |
| ನಿಪಿ 20 | ಃ | ಪಿ.ಡಿ.ಒ. ರವರು ನೀಡಿದ ವರದಿ |
| ನಿಪಿ 20(ಎ) | ಃ | ಸಹಿ |
| ನಿಪಿ 21-22 | ಃ | ವರದಿಗಳು |
| ನಿಪಿ 21(ಎ)-22(ಎ) | ಃ | ಸಹಿಗಳು |

Visit **ecourts.gov.in** for updates or download mobile app “**eCourts Services**” from Android or iOS

| | | |
|---|---|---|
| ನಿಪಿ 23 | ಃ | ಆರೋೀಪಿಯ ಸ್ವಇಚ್ಚಾ ಹೇಳಿಕೆ |
| ನಿಪಿ 23(ಎ) | ಃ | ಸಹಿ |

***ಆರೋೀಪಿ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ***

-ಇಲ್ಲಾ-

**ಅಭಿಯೋಜನೆಯವರ ಪರವಾಗಿ ಗುರ್ತಿಸಿದ ಮುದ್ದೆಮಾಲುಗಳ ಪಟ್ಟಿಃ**

ಎಂ.ಒ.1 ರಿಂದ 3ಃ ಕರ ಪತ್ರಗಳು

M N NANDINI
Digitally signed by M N NANDINI
Date: 2026.07.17 17:00:07 +0530

ಸಹಿ/-xxx17.07.2026.
**(ಶ್ರೀಮತಿ ನಂದಿನಿ ಎಂ.ಎನ್.)**
**ಸಿವಿಲ್‌ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂಃ ಕೊಪ್ಪ**

Visit **ecourts.gov.in** for updates or download mobile app "**eCourts Services**" from Android or iOS